Mr. DEPUTY SPEAKER.—I appreciate the clever attitude of the Hon. Member. I have admiration for it. Earlier before you were assuming your seat I said you have taken 3 minutes for which you said only 2 minutes you had taken and there is one more minute. But the question is you must help me to help the other members. You are escaping your responsibility.

Sri M. S. KRISHNAN.—You were pleased to say that since the Chief Minister is making a statement I should resume my seat. Accordingly I resumed my seat. I never want to escape and have a chance to speak. Kindly allow me only 2 or 3 minutes.

Mr. DEPUTY SPEAKER.—It is not possible.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು......

*　　*　　*　　*

ಉಪಾಧ್ಯಕ್ಷರು.—ರೆಕಾರ್ಡ್ ಮಾಡಬೇಡಿ.

(ಶ್ರೀ ಬಿ. ಪುಟ್ಟಸ್ವಾಮಯ್ಯನವರು ಮತ್ತು ಇನ್ನಿತರ ಸದಸ್ಯರುಗಳು ಸಭಾತ್ಯಾಗ ಮಾಡಿದರು)

Budget Estimates for 1973-74 (General Discussion)

(Debate Continued)

† ಶ್ರೀ ಐ. ಜಿ. ಸನದಿ (ಹುಬ್ಬಳ್ಳಿ).—ಮಾನ್ಯ ಉಪಾಧ್ಯಕ್ಷರೇ, ನೈಸರ್ಗಿಕ ಪ್ರಚಂಡ ಸವಾಲನ್ನು ಅಪೂರ್ವ ಸಾಹಸದಿಂದ ಅರ್ಥಮಂತ್ರಿಗಳು ಎದುರಿಸಿ ಮಂಡಿಸಿದಂಥ 1973-74ನೇ ಸಾಲಿನ ಆಯವ್ಯಯ ಪತ್ರವನ್ನು ಕನ್ನಡ ಕುಲಕೋಟಿಯ ಪರವಾಗಿ ಸ್ವಾಗತ ಮಾಡುತ್ತಿದ್ದೇನೆ. ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಡಿ. ದೇವರಾಜ ಅರಸ್ ಅವರು ಅಭಾವ ಪೀಡಿತ ಪ್ರದೇಶಗಳಲ್ಲಿ ಅಗತ್ಯವಾದಂಥ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಕೊಂಡಿರುವ ಸಮಯದಲ್ಲಿಯೇ ಮಾನ್ಯ ಅರ್ಥಿಕ ಮಂತ್ರಿಗಳು ಮಂಡಿಸಿದಂತಹ ಈ ಬಡ್ಜೆಟ್ ಬರಗಾಲದ ಬುತ್ತಿಯಾಗಿದೆ ಎಂದರೆ ತಪ್ಪಾಗಲಾರದು. ಗ್ರಾಮಾಂತರ ಪ್ರದೇಶಗಳಲ್ಲಿರುವ ದಾರಿದ್ರ್ಯ ಜೀವಿಗಳು, ಹತಭಾಗ್ಯರು ಈ ಪೆಡಂಭೂತವಾದಂಥ ಕ್ಷಾಮವನ್ನು ಎದುರಿಸುತ್ತಿರುವಾಗಲೇ ಪ್ರಧಾನಿಯವರ ಆಗಮನವಾಯಿತು. ಪ್ರಧಾನಿಯವರ ಆಗಮನ ಅಲ್ಲಿಯ ಪ್ರಜೆಗಳ, ಪ್ರಾಣಿಗಳ ಮೂಕವೇದನೆಯನ್ನು ಪ್ರಧಾನಿಯವರೇ ಪಡೆದಂತಾಯಿತೆಂದು ನಾನು ಭಾವಿಸಿದ್ದೇನೆ. ಅವರು ಅಲ್ಲಿಗೆ ಬಂದಾಗ ಕೇವಲ ಮೌನವಾಗಿ ಇದ್ದುದ್ದು ಬಹುಶಃ ನನ್ನ ಅರ್ಥದಲ್ಲಿ ವಿಧಿಯನ್ನು ಕಂಡು ಮೌನವಾಗಿರಬೇಕೆಂದು. ಅವರ ರಾಜಕೀಯ ಜೀವನದಲ್ಲಿ ಪಾರ್ಲಿಮೆಂಟ್ ಚುನಾವಣೆಯಾದ ಮೇಲೆ ಬರಗಾಲದ ಸಮಸ್ಯೆ ಸ್ವಲ್ಪ ಬಂತು. ಆದರೆ ವಿಧಾನಸಭೆಗಳ ಚುನಾವಣೆಯಾದ ಮೇಲೆ, ಪ್ರಚಂಡ ಬಹುಮತದಿಂದ ಗೆದ್ದು ಬಂದಮೇಲೆ ಈ ಬರಗಾಲದ ಸಮಸ್ಯೆ ಜಾಸ್ತಿಯಾಗುತ್ತಾ ಬಂದಿದೆ. ಈ ಬರಗಾಲ ಪ್ರದೇಶದ ಜನರು ಅನುಭವಿಸುತ್ತಿರುವ ಮೂಕ ವೇದನೆಯನ್ನು ಪ್ರಧಾನಿಯವರು ನೋಡಿ ನೈಸರ್ಗಿಕ ಒಡ್ಡಿದ ಈ ಕ್ಷಾಮ ವಿವಿಧ ಅದನ್ನು ಎದುರಿಸಲಿಕ್ಕೆ ನನ್ನನ್ನು ಪರೀಕ್ಷೆಗಾಗಿ ಒಡ್ಡಿದೆಯೇ ಎಂದು ಪ್ರಧಾನ ಮಂತ್ರಿಗಳು ವಿಚಾರ ಮಾಡಿರಬೇಕೆಂದು ಕಾಣುತ್ತದೆ. ಕರ್ನಾಟಕದ ಜನತೆಯು ಕಂಬನಿಯನ್ನು ಅವರ ಅಂತರಾಳದಲ್ಲಿರುವ ದುಃಖವನ್ನು ಅವರು ಅರ್ಥ ಮಾಡಿಕೊಂಡಿದ್ದಾರೆ. ಅದರಂತೆ ಅದನ್ನು ಹೋಗಲಾಡಿಸಲು ಬೇಕಾದ ಸವಲತ್ತುಗಳನ್ನೆಲ್ಲಾ ಒದಗಿಸುವ ಭರವಸೆಯನ್ನು ಶ್ರೀಮತಿ ಇಂದಿರಾ ಗಾಂಧಿಯವರು ನಮಗೆ ಕೊಟ್ಟಿದ್ದಾರೆ. ಅವರು ಅಂದು ಮೌನವಾಗಿದ್ದರು, ಮಾತನಾಡಲಿಲ್ಲ, ನಗಲಿಲ್ಲ, ಕಣ್ಣೀರು ಸುರಿಸಲಿಲ್ಲ ಎಂಬ ಮಾತನ್ನು ಕೆಲವರು ಹೇಳಿದ್ದಾರೆ. ಅದರ ಬಗ್ಗೆ ನನ್ನ ಅರ್ಥದಲ್ಲಿ ಹೇಳಬೇಕೆಂದರೆ, ಅಂದು ಅವರು ನಗುವ ಪ್ರಶ್ನೆ ಇರಲಿಲ್ಲ ; ಅವರ ಉದ್ದೇಶ ಈಶ್ವರ

**** Matter not recorded as ordered by the Chair.

(ಶ್ರೀ ಐ. ಜಿ. ಸನದಿ)

ನಣಕಲ್ ಅವರು ಹೇಳಿರುವ ಹಾಗೆ ಇವೊತ್ತು ದೇಶದಲ್ಲಿರತಕ್ಕಂಥ ದಾರಿದ್ರ್ಯವನ್ನು ತೊಲಗಿಸ ಬೇಕು ; ಆಗ ಜನರು ಬದುಕುತ್ತಾರೆ, ಜನರು ಬದುಕಿದರೆ ಸರಕಾರ ಬದುಕುತ್ತದೆ. ಸರ್ಕಾರ ಬದುಕಿದರೆ ಸಮಾಜ ಬದುಕುತ್ತದೆಂಬ ಮಾತನ್ನು ಅವರು ಹೇಳಿದ್ದಾರೆ. ಅದನ್ನು ಪ್ರಧಾನಮಂತ್ರಿಗಳು ಅರ್ಥಮಾಡಿಕೊಂಡಿರಬೇಕು. ಆ ಜನರ ಕಷ್ಟವನ್ನು ನೋಡಿದರೆ ನಿಜಕ್ಕೂ ನಮಗೆ ದುಃಖವಾಗುತ್ತದೆ. ನೈಸರ್ಗಿಕ ವಿಕೋಪಕ್ಕೆ ಅವರು ಒಳಗಾಗಿದ್ದಾರೆ. ಮತ್ತು ಅದರ ವಿರುದ್ಧ ಹೋರಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ಒಂದೇ ಎಲ್ಲವನ್ನೂ ಮಾಡಬೇಕೆಂದು ವಿರೋಧ ಪಕ್ಷದವರು ಹೇಳುತ್ತಿದ್ದಾರೆ. ಅದು ಸರಿಯಲ್ಲ. ಇದರಲ್ಲಿ ನಾವೆಲ್ಲರೂ ಭಾಗಿಗಳಾಗಬೇಕು. ನಮ್ಮ ಹಿಂದೂ ಧರ್ಮದಲ್ಲಿ ಹೇಳಿರುವಂತೆ ಎಲ್ಲರಲ್ಲಿಯೂ ಚತುರ್ವಿಧ ಪುರುಷಾರ್ಥಗಳಿರಬೇಕು. ಚತುರ್ವಿಧ ಪುರುಷಾರ್ಥಗಳೆಂದರೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ. ಮೊದಲು ನಾವು ಧರ್ಮ ಮತ್ತು ಅರ್ಥವನ್ನು ಸಂಪಾದನೆ ಮಾಡಬೇಕು ನಂತರ ಉಪಭೋಗ ಮಾಡಬೇಕು. ಎಲ್ಲರೂ ಧರ್ಮದಿಂದ ನಡೆದುಕೊಳ್ಳಬೇಕು, ಕೊನೆಯದು ಮೋಕ್ಷ. ಅಲ್ಲಿ ಜನರು ಕಷ್ಟದಿಂದಿರುವಾಗ ನಾವುಗಳು ಇಲ್ಲಿ ಅರ್ಥ ಮತ್ತು ಕಾಮುಗಳ ಜೊತೆಯಲ್ಲಿ ಹೋರಾಡುವುದು ಸರಿಯಲ್ಲ. ಅವರೊಡನೆ ನಾವೂ ಸಹ ಭಾಗಿಗಳಾಗಿ ಅವರ ಕಷ್ಟದಲ್ಲಿ ಪಾಲ್ಗೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಸದಸ್ಯರು ನಾವು ನಾವು ಎಂದು ಹೇಳುತ್ತಿದ್ದಾರೆ ; ನಾವು ಅಂದರೆ ಯಾರು ಎಂದು ಹೇಳಬೇಕು.

ಶ್ರೀ ಐ. ಜಿ. ಸನದಿ.—ಇಂದು ನಮ್ಮ ಕರ್ನಾಟಕ ರಾಜ್ಯದಲ್ಲಿ ತಮಗೆಲ್ಲರಿಗೂ ಗೊತ್ತಿರುವಂತೆ ಲಕ್ಷಾಂತರ ಜನರು ಕಷ್ಟದಲ್ಲಿದ್ದಾರೆ. ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡುವುದು ಸರ್ಕಾರದ ಮತ್ತು ನಮ್ಮೆಲ್ಲರ ಕರ್ತವ್ಯವೂ ಸಹ ಆಗಿದೆ. ಹಿಂದೆ ಯಾವಾಗಲೂ ಇಲ್ಲದಂಥ ಬರಗಾಲ ಇಂದು ಬಂದಿದೆ. ಈ ಬರಗಾಲ ಬಡಜನರ ರಕ್ತವನ್ನು ಹೀರುತ್ತಿರುವುದರಿಂದ ಇಂದು ಸಮಾಜದಲ್ಲಿ ಹಲಾಹಲ ಎದ್ದಿದೆ. ಸಮಾಜದ ನಂಜನ್ನು ಕುಡಿದು ಸಮತಾವಾದ ಸಮಾಜವನ್ನು ಜಾರಿಗೆ ತರುವುದು ಸಾಧ್ಯವಿಲ್ಲ. ಇಂದು ದೇಶದಲ್ಲಿರುವ ಬಡತನವನ್ನು ಹೋಗಲಾಡಿಸ ಬೇಕೆಂಬುದೇ ಇಂದಿರಾಗಾಂಧಿಯವರ ಕಹೆಯ ಮಂತ್ರವಾಗಿದೆ. ಹಿಂದಿನಿಂದ ಬಂದಿರುವ ಈ ಬಡತನವನ್ನು ಅಧಿಕಾರ ವಹಿಸಿಕೊಂಡ ಕೂಡಲೇ ಹೋಗಲಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ದ್ವಾಪರಯುಗದಲ್ಲಿಯೂ ಬಡತನ ಇತ್ತು. ಆಗ ಬಡತನದಲ್ಲಿದ್ದ ಸುಧಾಮನ ಕಷ್ಟವನ್ನು ಶ್ರೀಕೃಷ್ಣನು ಬಂದು ತನ್ನಲ್ಲಿದ್ದ ಸೌಭಾಗ್ಯವನ್ನು ಅವನಿಗೆ ಕೊಟ್ಟ. ಅದರಂತೆ ಸರ್ಕಾರವೇ ಆಗಲೀ, ಶಾಸಕರೇ ಆಗಲೀ, ನಾವೆಲ್ಲರೂ ಕೂಡ ಸಮಾಜದಲ್ಲಿರುವ ಬಡತನವನ್ನು ತೆಗೆದುಕೊಂಡು ನಮ್ಮಲ್ಲಿರುವ ವೈಭವವನ್ನು ಅವರಿಗೆ ಕೊಟ್ಟು ಸುಖೀ ಸಮಾಜವನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡ ಬೇಕು. ಅದಕ್ಕೆ ಎಲ್ಲರೂ ಸಹಕಾರ ಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಶ್ರೀಮಾನ್ ಘೋರ್ಪಡೆಯವರು ಏನ ತಮ್ಮ ಆಯವ್ಯಯ ಪತ್ರದಲ್ಲಿ ಈ ಬರಗಾಲವನ್ನು ಹೋಗಲಾಡಿಸಲು ಕ್ರಮ ತೆಗೆದುಕೊಂಡಿದ್ದಾರೆ, ಆ ಒಂದು ಅಂಕೆಅಂಶಗಳ ಕಡೆಗೆ ಗಮನ ಕೊಟ್ಟು ನೋಡಿದಾಗ ಬಹುಶಃ ಇದರಿಂದ ಸಾಕಷ್ಟು ಪ್ರಮಾಣದಲ್ಲಿ ಬರಗಾಲವನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಇಲ್ಲಿಯವರೆಗೆ ಆಡಳಿತವನ್ನು ವಹಿಸಿಕೊಂಡಿದ್ದವರು ಈ ಬರಗಾಲವನ್ನು ಹೋಗಲಾಡಿಸುವುದರಲ್ಲಿ ವಿಫಲರಾಗಿದ್ದಾರೆಂದು ಹೇಳಬಹುದು. ಹಿಂದಿನವರು ಪಾಪ ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಆಗ ಏನನ್ನೂ ಮಾಡದಿದ್ದವರು ಈಗ ಯಾವ ಮಾತುಗಳನ್ನು ಆಡುತ್ತಿದ್ದಾರೆಂಬ ಬಗ್ಗೆ ನಾನು ಏನನ್ನೂ ಹೇಳುವುದಕ್ಕೆ ಬಯಸುವುದಿಲ್ಲ. ಈಗಲೂ ಅವರು ಪಿಕೆಟಿಂಗ್ ಮಾಡುತ್ತಿದ್ದಾರೆ. ಮಾಡುವ ನೀಡುವ ನಿಜಗುಣ ಅವರಲ್ಲಿ ಇಲ್ಲ.

ಬಡ್ಜೆಟ್ಟಿನ ಬಗ್ಗೆ ಕೆಲವು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಅದರಲ್ಲಿ ವಿದ್ಯಾ ಸಂಸ್ಥೆಗಳ ಬಗ್ಗೆ ಕೆಲವೊಂದು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಮೈಸೂರು ಮತ್ತು ಬೆಂಗಳೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳಿಗೆ ನಮ್ಮ ಸರ್ಕಾರದವರು ಈಗಾಗಲೇ 2 ಕೋಟಿ 59 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಧಾರವಾಡದಲ್ಲಿ ಅಗ್ರಿಕಲ್ಚರಲ್ ಯುನಿವರ್ಸಿಟಿಯನ್ನೂ ಸೊಂಡೂರಿನಲ್ಲಿ ತಾಂತ್ರಿಕ ವಿಶ್ವವಿದ್ಯಾನಿಲಯವನ್ನೂ ಸ್ಥಾಪನೆ ಮಾಡುವುದಕ್ಕೆ ನಮ್ಮ ಅರ್ಥ ಮಂತ್ರಿಗಳಾದ ಘೋರ್ಪಡೆಯವರು ಪ್ರಯತ್ನ ಮಾಡುತ್ತಿದ್ದಾರೆ. ವಿಶ್ವವಿದ್ಯಾನಿಲಯಗಳು ನಮ್ಮ ನಮ್ಮ ರಾಜ್ಯದ ಸಂಪತ್ತು ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಮ್ಮ ವಿಶ್ವವಿದ್ಯಾನಿಲಯಗಳು

ನಳಂದ ವಿಶ್ವವಿದ್ಯಾನಿಲಯದ ರೀತಿ ಆಗಬೇಕು. ದುರ್ದೈವದಿಂದ ಸರ್ಕಾರ ಎಷ್ಟೋ ಸೌಲಭ್ಯಗಳನ್ನು ಈ ವಿಶ್ವವಿದ್ಯಾನಿಲಯಗಳಿಗೆ ಒದಗಿಸಿದರೂ ಕೂಡ ಪರಂಪರೆಯಾಗಿ ವಿಶ್ವವಿದ್ಯಾನಿಲಯಗಳಲ್ಲಿ ಸ್ವಜನಪಕ್ಷಪಾತವಾಗಲೀ ದುರುಪಯೋಗವಾಗಲೀ ಇವುಗಳನ್ನು ತಪ್ಪಿಸಲು ಸರ್ಕಾರ ಈ ಕಡೆ ಗಮನವನ್ನು ಹರಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ಕಳಕಳಿಯಿಂದ ಹೇಳಬಯಸುತ್ತೇನೆ.

ಕಾಳಿನದಿಯಲ್ಲಿ ಏನು ಕೆಲಸ ನಡೆಯುತ್ತಿದೆ ಎನ್ನುವುದನ್ನು ಶಾಸಕರಿಗೆ ಸರ್ಕಾರದವರು ತೋರಿಸಬೇಕು. ಅಲ್ಲಿ ಒಂದು ಗಿರಿಧಾಮವನ್ನು ಕಟ್ಟಿಸಿದರೆ, ಅದರಿಂದ ಪ್ರವಾಸಿಗರಿಗೆ ಆಕರ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಕ್ಷಾಮ ಪೀಡಿತ ಪ್ರದೇಶಗಳಾದ ಗುಲ್ಬರ್ಗ, ರಾಯಚೂರು, ಬೀದರ್, ಬೆಳಗಾಮ್, ಬಿಜಾಪುರ ಮತ್ತು ಧಾರವಾಡ ಈ ಪ್ರದೇಶಗಳ ಜನಗಳಿಗೆ ಪರಿಹಾರವನ್ನು ಒದಗಿಸುವುದರಲ್ಲಿ ಸರ್ಕಾರದ ಜವಾಬ್ದಾರಿ ಮಾತ್ರವಲ್ಲ ನಮ್ಮೆಲ್ಲರ ಮೇಲೆಯೂ ಇದೆ. ಅಲ್ಲಿ ಸರ್ಕಾರದ ಹಣ ಪೋಲಾಗುವ ಬಗ್ಗೆ ಆದ್ಯಗಮನ ಕೊಡಬೇಕು. ಅಲ್ಲಿರತಕ್ಕ ಜನಗಳು ದನಕರುಗಳನ್ನು ಕಳೆದುಕೊಂಡಿದ್ದಾರೆ. ಇದ್ದಂತಹ ಹಣ ಒಡವೆ ವಸ್ತುಗಳನ್ನೆಲ್ಲಾ ಕಳೆದುಕೊಂಡಿದ್ದಾರೆ. ಆದ್ದರಿಂದ ಅವರಿಗೆ ವ್ಯವಸಾಯಕ್ಕೆ ಅನುಕೂಲವಾಗುವ ಹಾಗೆ ಬೀಜ ಗೊಬ್ಬರ ಇತ್ಯಾದಿಗಳನ್ನು ಒದಗಿಸಿ ಅವರಿಗೆ ಅನುಕೂಲ ಮಾಡಿಕೊಡಬೇಕು ಎಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಹುಬ್ಬಳ್ಳಿ ಧಾರವಾಡ ಮಹಾ ನಗರದಲ್ಲಿ ಡೆಪ್ಯುಟಿ ಕಮಿಷನರ, ಅಸಿಸ್ಟೆಂಟ್ ಕಮಿಷನರ್ ಮುಂತಾದ ದೊಡ್ಡ ದೊಡ್ಡ ಅಧಿಕಾರಿಗಳು ಇದ್ದಾರೆ. ಅನೇಕ ಜನ ಕೂಲಿಗಾರರು ಇದ್ದಾರೆ. ಮತ್ತು ಅದು ಕರ್ನಾಟಕದ ಪ್ರಮುಖವಾದ ಸ್ಥಳ. ಆದ್ದರಿಂದ ಅಲ್ಲಿ ಒಂದು ಏರೋಡ್ರೋಮ್ ಮಾಡಬೇಕು. ಅದು ಕೈಗಾರಿಕೆಯಲ್ಲಿ ಬ್ಯಾಕ್‌ವರ್ಡ ಏರಿಯಾ ಆದ್ದರಿಂದ ಅಲ್ಲಿ ಕೆಲವು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಮತ್ತು ಹುಬ್ಬಳಿಯಲ್ಲಿಯೂ ಕೆಲವು ಸ್ಲಮ್ ಏರಿಯಾದಲ್ಲಿ ಯಾವ ಹೂವೂ ಇಲ್ಲ, ಬಳ್ಳಿಯೂ ಇಲ್ಲ. ಆದ್ದರಿಂದ ಅಲ್ಲಿರತಕ್ಕ ಸ್ಲಮ್ ನಿರ್ಮೂಲ ಮಾಡಲು ಮತ್ತು ಅಲ್ಲಿ ಕೆಲವು ಹೂವಿನ ಗಿಡ ಬಳ್ಳಿಗಳನ್ನು ಬೆಳಸುವುದಕ್ಕೆ ಸರ್ಕಾರದವರು ಸಹಾಯ ಮಾಡಬೇಕು. ಅಲ್ಲಿ ಚಿಕ್ಕಪುಟ್ಟ ಕೈಗಾರಿಕೆಗಳು ಸ್ಥಾಪನೆಯಾಗಬೇಕಾದರೆ ಅಲ್ಲಿ ಏರೋಡ್ರೋಮ್ ಆಗಬೇಕು. ಇದರ ಜೊತೆಗೆ ಹುಬ್ಬಳ್ಳಿ ಕಾರವಾರ ರೈಲ್ವೆ ಮಾರ್ಗವನ್ನು ಕಲ್ಪಿಸಬೇಕು. ಹುಬ್ಬಳ್ಳಿ-ಗದಗ್ ಶಿವಮೊಗ್ಗ-ಮಂಗಳೂರು ರೈಲ್ವೆ ಮಾರ್ಗವನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕು ಎಂದು ನಾನು ಹೇಳುತ್ತೇನೆ.

ಸಂಸ್ಕೃತ, ವಿಜ್ಞಾನ, ಸಾಹಿತ್ಯ ಇವುಗಳಲ್ಲಿರತಕ್ಕ ಆಳವಾದ ನೈತಿಕ ಹಿನ್ನೆಲೆ ಬೇಕಾದಷ್ಟು ಇದೆ. ಅದಕ್ಕಾಗಿ 5–6 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಮೀಸಲಾಗಿಟ್ಟು ಅವನ್ನು ಅಭಿವೃದ್ಧಿ ಪಡಿಸಬೇಕು. ಕನ್ನಡದ ಅಭಿವೃದ್ಧಿ ಹೆಚ್ಚಿನ ಮಟ್ಟದಲ್ಲಿ ಆಗಬೇಕು. ಕರ್ನಾಟಕಕ್ಕೆ ಕೀರ್ತಿ ತರುವಂತಾಗಬೇಕು ಎಂದು ಹೇಳಿ ಮಾನ್ಯ ಅರ್ಥಸಚಿವರು ಮಂಡಿಸಿರತಕ್ಕ ಆಯವ್ಯಯ ಪತ್ರವನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಮಾನ ಅಧ್ಯಕ್ಷರೆ, ಮಾನ್ಯ ಅರ್ಥ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ 1973-74ನೇ ಸಾಲಿನ ಆಯ್ಯವ್ಯಯ ಪತ್ರದ ಬಗ್ಗೆ ಕೆಲವು ವಿಷಯಗಳನ್ನು ನಾನು ಹೇಳಬಯಸುತ್ತೇನೆ. ಮೊದಲನೆಯದಾಗಿ ನಮ್ಮ ಮೈಸೂರು ರಾಜ್ಯದಲ್ಲಿ 8 ಜಿಲ್ಲೆಗಳಲ್ಲಿ ಬರಗಾಲ ಪರಿಸ್ಥಿತಿ ಇದೆ. ಆದಕ್ಕಾಗಿ 45 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬರಗಾಲ ಪರಿಸ್ಥಿತಿಯನ್ನು ಎದುರಿಸಲು 10 ಲಕ್ಷ ಜನಗಳಿಗೆ ಉದ್ಯೋಗವನ್ನು ಒದಗಿಸುತ್ತೇವೆ ಎಂದು ಹೇಳಿದ್ದಾರೆ. 8 ಜಿಲ್ಲೆಗಳಲ್ಲಿ 10 ಲಕ್ಷ ಜನಗಳಿಗೆ ಉದ್ಯೋಗವನ್ನು ಒದಗಿಸುತ್ತೇವೆ ಎಂದು ಹೇಳಿದರೆ ಸಾಲದು. ಇನ್ನೂ ಹೆಚ್ಚಿನ ಜನಗಳಿಗೆ ಉದ್ಯೋಗವನ್ನು ಒದಗಿಸಬೇಕು ಎಂಬುದು ನನ್ನ ಅಭಿಪ್ರಾಯ. ಮತ್ತು ಅಲ್ಲಿ ಪರಿಹಾರ ಕೆಲಸಕಾರ್ಯಗಳಲ್ಲಿ ಕೆಲಸ ಮಾಡತಕ್ಕ ಕೂಲಿಗಾರರಿಗೆ 2 ರೂಪಾಯಿ $2\frac{1}{2}$ ರೂಪಾಯಿ ಕೂಲಿಯನ್ನು ಕೊಟ್ಟರೆ ಅದು ಅವರಿಗೆ ಸಾಕಾಗುವುದಿಲ್ಲ. ಸಾಯಿಲ್ ಕನ್‌ಸರ್‌ವೇಷನ್ನಿಗೆ 13 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಎಲ್ಲಿ ಮಳೆ ಜಾಸ್ತಿ ಇದೆಯೋ ಅಲ್ಲಿ ಭೂಸವೆತ ಇದೆ. ಭೂಸಾರ ರಕ್ಷಣೆಯಾಗಿವೆ. ಆದ್ದರಿಂದ ಅದಕ್ಕೆ 13 ಕೋಟಿ ರೂಪಾಯಿಗಳನ್ನು ಈಗಿನ ಪರಿಸ್ಥಿತಿಯಲ್ಲಿ ಖರ್ಚು ಮಾಡಬೇಕಾಗಿರಲಿಲ್ಲ. ಆ ಹಣವನ್ನು ನೀರಾವರಿಗೆ ಉಪಯೋಗಿಸಿಕೊಂಡಿದ್ದರೆ ಚೆನ್ನಾಗಿತ್ತು. 8 ಕೋಟಿ ರೂಪಾಯಿಗಳನ್ನು ರಸ್ತೆಗಳಿಗೆ ಖರ್ಚುಮಾಡಬೇಕು ಎಂದು ಏರ್ಪಾಟು ಹಾಕಿಕೊಂಡಿದ್ದಾರೆ. ರಸ್ತೆಗಳಿಗೆ ಇಷ್ಟು ಹಣವನ್ನು ಖರ್ಚು ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಅದನ್ನೂ ಕೂಡ ನೀರಾವರಿಗೆ ಉಪ

(ಶ್ರೀ ಎನ್. ಎಸ್. ಗುರುಸಿದ್ಧಪ್ಪ)

ಯೋಗಿಸಿಕೊಂಡಿದ್ದರೆ ಚೆನ್ನಾಗಿತ್ತು. ಮೈನರ್ ಇರಿಗೇಷನ್, ಮೀಡಿಯಂ ಇರಿಗೇಷನ್ ಮತ್ತು ಮೇಜರ್ ಇರಿಗೇಷನ್ ಇದಕ್ಕಾಗಿ 22 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಹೊರಟಿದ್ದಾರೆ. ಅದನ್ನು ಹೆಚ್ಚು ಮಾಡಿ 32 ಕೋಟಿ ರೂಪಾಯಿಗಳನ್ನು ಮಾಡಬೇಕಾಗಿತ್ತು. ಎರಡೂವರೆ ಲಕ್ಷ ನಿವೇಶನಗಳನ್ನು ಬಡವರಿಗೆ ಹಂಚಿದ್ದೇವೆ ಎಂದು ಹೇಳಿದ್ದಾರೆ. ಆ ನಿವೇಶನಗಳಲ್ಲಿ ಅನೇಕ ನಿವೇಶನಗಳು ಕೆಲಸಕ್ಕೆ ಬಾರದ ನಿವೇಶನಗಳಾಗಿವೆ. ಆ ನಿವೇಶನಗಳಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಬೇಕಾದರೆ 2ರಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ನಿವೇಶನಗಳನ್ನು ಹಂಚುವಾಗ ಅವು ಮನೆಗಳನ್ನು ಕಟ್ಟುವುದಕ್ಕೆ ಯೋಗ್ಯವಾಗಿವೆಯೋ ಅಥವಾ ಇಲ್ಲವೇ ಎಂಬುದನ್ನು ಯೋಚನೆ ಮಾಡಿ ಹಂಚಬೇಕಾಗಿತ್ತು. 25 ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಸರ್ಕಾರದವರು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಆ ಮನೆಗಳನ್ನು ಕಟ್ಟುವಾಗ ದುಡ್ಡು ಇಂಜಿನಿಯರ್ಸ್ ಮತ್ತು ಕಂಟ್ರಾಕ್ಟರುಗಳ ಪಾಲು ಆಗಬಾರದು. ಮನೆಗಳನ್ನು ಬಂದೋಬಸ್ತಾಗಿ ಕಟ್ಟಬೇಕು. ನೀರಾವರಿಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕು. ನಮ್ಮ ರಾಜ್ಯದ ನೀರಾವರಿ ಯೋಜನೆಗಳನ್ನು ಮುಗಿಸಬೇಕಾದರೆ 250 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈಗ ನೀರಾವರಿ ಯೋಜನೆಗಳಿಗೆ ಹಣವನ್ನು ಒದಗಿಸುವ ರೀತಿಯಲ್ಲಿ ಹಣವನ್ನು ಒದಗಿಸಿದರೆ ಇನ್ನು 10 ವರ್ಷವಾದರೂ ನೀರಾವರಿ ಯೋಜನೆಗಳು ಮುಗಿಯುವುದಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಹೆಚ್ಚು ನಿಗಾವಹಿಸಬೇಕು ಎಂದು ನಾನು ಹೇಳುತ್ತೇನೆ.

4-30 P.M.

ಹಳೆಯ ಮೈಸೂರಿನಲ್ಲಿ ಕಬನಿ ಯೋಜನೆ 10 ವರ್ಷವಾದರೂ ಇನ್ನೂ ಮುಗಿದಿಲ್ಲ. ಈಗ ನಮ್ಮ ಬಜೆಟ್‌ನಲ್ಲಿ ಹಣ ಒದಗಿಸಿದ ರೀತಿಯಲ್ಲಿ ಹೋದರೂ ಸಹ ಇನ್ನು 10 ವರ್ಷವಾದರೂ ಅದು ಮುಗಿಯುವುದಿಲ್ಲ. ಹೇಮಾವತಿ, ಹಾರಂಗಿ, ಯೋಜನೆಗಳ ಕೆಲಸ ಸಹ ಬಹಳ ಕುಂಠಿತವಾಗಿದೆ. ಇದಕ್ಕೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ನಮಗೆ ಈಗ 60 ಲಕ್ಷಟನ್ ಆಹಾರ ಬೇಕಾಗಿದ್ದರೂ ಸಹ ಕೇವಲ 47 ಲಕ್ಷ ಟನ್ ಮಾತ್ರ ಬರುತ್ತದೆ. ಇದರಿಂದ 13 ಲಕ್ಷದಷ್ಟು ಕೊರತೆಯಾಗುತ್ತದೆ. ಅದಕ್ಕೆ ಈ ನೀರಾವರಿಯನ್ನು ಹೆಚ್ಚು ಮಾಡದಿದ್ದರೆ ಈ ಅಭಾವ ಇನ್ನೂ ಹೆಚ್ಚಾಗಿ ಜನರಿಗೆ ತುಂಬಾ ತೊಂದರೆಯಾಗುವ ಸಂದರ್ಭ ಬರುತ್ತದೆ. ಆದ್ದರಿಂದ ಈ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಹೆಚ್ಚು ಕೆಲಸಗಳನ್ನು ಮಾಡಬೇಕು. ಮೈಸೂರು ಜಿಲ್ಲೆಯಲ್ಲಿ ಇನ್ನೂ ಪ್ಲಾನುಗಳನ್ನು ಮಾಡ ತ್ತಾರೆಯೇ ಹೊರತು ಕಾರ್ಯಗತ ಮಾಡುತ್ತಾ ಇಲ್ಲ. ಕೃಷ್ಣಾ ಬಲದಂಡೆಯಲ್ಲಿ ಯೋಜನೆಯಾದರೆ, 1ಕಾಲು ಲಕ್ಷ ಎಕರೆ ನೀರಾವರಿಯಾಗುತ್ತದೆ; ಮೂಗು ಯೋಜನೆಯಲ್ಲಿ ಒಂದೂಕಾಲು ಲಕ್ಷ ಎಕರೆ ನೀರಾವರಿ ಯಾಗುತ್ತದೆ; ಮತ್ತು ಗುಂಡಲ್ ಪ್ರೊಜೆಕ್ಟ್ ನಲ್ಲಿ ಒಂದು ಲಕ್ಷ ಎಕರೆ ನೀರಾವರಿಯಾಗುತ್ತದೆ. ಇವೆಲ್ಲವನ್ನೂ ಮಾಡಿದರೆ ಸುಮಾರು 40 ಪರ್‌ಸೆಂಟ್ ಪ್ರದೇಶಗಳಿಗೆ ನೀರಾವರಿಯಾಗುತ್ತದೆ. ಇಂತಹ ಯೋಜನೆಗಳನ್ನು ನಾವು ಮುಗಿಸಿದರೆ ನಮ್ಮ ಆಹಾರದ ಕೊರತೆಯನ್ನು ಕಡಿಮೆ ಮಾಡಿ ನಾವು ಹೊರಗಡೆ ಸಹ ಆಹಾರವನ್ನು ಕಳಿಸಬಹುದು. ಆದ್ದರಿಂದ ನೀರಾವರಿಗೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ಇನ್ನು ವ್ಯವಸಾಯಗಾರರಿಗೆ ಸಾಕಷ್ಟು ಸಕಾಲದಲ್ಲಿ ಸರಕಾರದಿಂದ ಸಹಾಯ ಮತ್ತು ಸಹಕಾರ ಸಿಗುತ್ತಾ ಇಲ್ಲ. ಈ ಸಾರಿ ಫರ್ಟಿಲೈಸರ್ಸ್ ಅಭಾವ ಜಾಸ್ತಿಯಾಗಿ ಅರ್ಧ ಬೆಳೆಯೇ ಕಡಿಮೆಯಾಗಿದೆ. ಆದ್ದರಿಂದ ಸರ್ಕಾರದವರು ಗೊಬ್ಬರ, ಬೀಜ ಮುಂತಾದವುಗಳನ್ನು ಸರಿಯಾದ ಸಮಯದಲ್ಲಿ ರೈತರಿಗೆ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಒಂದು ಲಕ್ಷ 90 ಸಾವಿರ ಪಂಪ್‌ಸೆಟ್ಟುಗಳಿಗೆ ಎಲೆಕ್ಟ್ರಿಸಿಟಿ ಒದಗಿಸುತ್ತೇವೆಂದು ಹೇಳಿದ್ದಾರೆ. ಈಗಾಗಲೇ ಇರತಕ್ಕಂತಹ ಪಂಪ್‌ಸೆಟ್ಟುಗಳು ವೋಲ್ಟೇಜ್ ಡ್ರಾಪ್ ಆಗಿ, ಮೋಟರ್ ಸುಟ್ಟುಹೋಗಿ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಅವುಗಳನ್ನು ಸರಿಮಾಡತಕ್ಕ ಕೆಲಸವನ್ನು ಮಾಡಬೇಕು. ಆದ್ದರಿಂದ ಈಗ ಇರುವ ಪಂಪ್‌ಸೆಟ್ಟುಗಳೇ ಸರಿಯಾಗಿ ಕೆಲಸ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವುದಲ್ಲದೆ ಇನ್ನೂ ಹೆಚ್ಚಿನ ಕರೆಂಟ್ ಕೊಟ್ಟರೆ ಪ್ರಯೋಜನವಿಲ್ಲ.

ಇನ್ನು ನಿರುದ್ಯೋಗ ಸಮಸ್ಯೆಗೆ ಬಜೆಟಿನಲ್ಲಿ ಏನೂ ಪ್ರೊವಿಜನ್ ಮಾಡಿಲ್ಲ. ದಿನಬೆಳಗಾದರೆ ನೂರಾರು ಜನರು ಬಂದು ಕೆಲಸ ಕೊಡಿ ಎಂದು ಕೇಳುತ್ತಿದ್ದಾರೆ. ಅದಕ್ಕೆ ಬಜೆಟಿನಲ್ಲಿ ಯಾವ ತರದ ಯೋಜನೆಯನ್ನು ಸಹ ಹಾಕಿಲ್ಲ.

ಇನ್ನು ಅರಣ್ಯ ಸಂಪತ್ತು ಅವ್ಯವಹಾರ ವಿಪರೀತವಾಗಿ ನಡೆಯುತ್ತಿದೆ. ದಿನಬೆಳಗಾದರೆ ಸ್ಯಾಂಡಲ್‌ವುಡ್ ಸ್ಮಗ್ಲಿಂಗ್ ವಿಪರೀತವಾಗಿ ನಡೆಯುತ್ತಿದೆ. ಆದರೆ ಅದನ್ನು ತಡೆಗಟ್ಟುವುದಕ್ಕೆ ಸರ್ಕಾರ ಯಾವ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲಾ. ಇನ್ನು ಲಂಚರುಷುವತ್ತುಗಳ ಬಗ್ಗೆ ಹೇಳಿ ಸುಖವಿಲ್ಲ. ಯಾವ ಇಲಾಖೆಯುಲ್ಲಾದರೂ ದುಡ್ಡು ಕೊಡದೆ ಕೆಲಸವಾಗುವುದಿಲ್ಲ. ಇನ್ನು ತೆರಿಗೆ ಕೊಡುವುದರಲ್ಲಿ ಸಹ ಅನೇಕ ಜನರು ತಪ್ಪಿಸಿಕೊಳ್ಳುತ್ತಿದ್ದಾರೆ ಬರುವಂತಹ ತೆರಿಗೆಗಳನ್ನು ಸರಿಯಾಗಿ ವಸೂಲು ಮಾಡಿದ್ರೇ ಆದರೆ ನಾವು ಹೊಸ ತೆರಿಗೆಗಳನ್ನು ಹಾಕುವ ಅವಕಾಶವಿಲ್ಲ. ಆದ್ದರಿಂದ ಸರ್ಕಾರದವರು ಶ್ರೀಮಂತರಿಂದ ಏನು ತೆರಿಗೆ ಬರಬೇಕೋ, ಅದನ್ನು ವಸೂಲು ಮಾಡುವುದಕ್ಕೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಆಮೇಲೆ ಸರ್ಕಾರ ಕಾಯಿದೆಗಳನ್ನು ಜಾರಿಗೆ ತಂದರೂ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತಾ ಇಲ್ಲ. ಆ ವೇಳೆ 13 ಸಾವಿರ ನ್ಯಾಯ ಬೆಲೆಯ ಅಂಗಡಿಗಳನ್ನು ಮೈಸೂರು ರಾಜ್ಯದಲ್ಲಿ ತೆಗೆದಿದ್ದೇವೆಂದು ಹೇಳಿದ್ದಾರೆ. ಆದರೆ ಅದಕ್ಕೆ ಸರಿಯಾಗಿ ಆಹಾರಸಾಮಗ್ರಿಗಳನ್ನು ಒಡಗಿಸಿದೆ ಇದ್ದರೆ ಏನೂ ಪ್ರಯೋಜನವಿಲ್ಲ. ಆದ್ದರಿಂದ ಬಡವರಿಗೆ ನ್ಯಾಯ ಬೆಲೆಯ ಅಂಗಡಿಯ ಮೂಲಕ ಆಹಾರ ಧಾನ್ಯಗಳನ್ನು ಒದಗಿಸುವಂತಹ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಬರಗಾಲ ಪ್ರದೇಶದಲ್ಲಿ ನೀರು ಸರಬರಾಜಿಗೆ ಮೂರು ಕೋಟಿ ಮತ್ತು ಕುಡಿಯುವ ನೀರಿನ ಪ್ರೋಗ್ರಾಂಗೆ ಎರಡು ಕೋಟಿ ರೂಪಾಯಿ ಇಟ್ಟಿದೆ ಎಂದು ಹೇಳಿದ್ದಾರೆ. ಆದರೆ ಈ ರೀತಿ ಎರಡು ಕೋಟಿ ಕುಡಿಯುವ ನೀರಿಗೆ ಒದಗಿಸಿದೆ ಎಂದು ಹೇಳಿರುವುದು ಸರಿಯಲ್ಲ. ಇದಕ್ಕೆ ಸರ್ಕಾರ ಎಷ್ಟು ಬೇಕಾದರೂ ಖರ್ಚು ಮಾಡಬೇಕು. ಈ ರೀತಿ ಇಷ್ಟು ಎಂದು ಫಿಕ್ಸ್ ಮಾಡಿರುವುದು ವಿಷಾದಕರವೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[The Chairman (Smt. Suumati S. Madiman) in the Chair.]

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಅಕಾಲ ಚಂಡಿಕಾ, ಚಿನ್ನಮಸ್ತಿಕಾ, ರಕ್ತಪಿಪಾಸಿನಿಯ ಈ ಯುಗದಲ್ಲಿ ಎಲ್ಲವೂ ಅಸ್ತವ್ಯಸ್ತವಾಗಿದೆ. ಉದಾಹರಣೆಗೆ ಸಂಪ್ರದಾಯವಾಗಿ ಈ ಬಜೆಟ್ ಚರ್ಚೆ ಆರಂಭ ಆಗಬೇಕಾದುದು ಈ ಸಭೆಯಲ್ಲಿ. ಆದರೆ ಅದರ ವಿರುದ್ಧವಾಗಿ ಈ ಸಾರಿ ಪರಿಷತ್ತಿನಲ್ಲಿ ಇದರ ಚರ್ಚೆ ಆರಂಭವಾಗಿದೆ. ಇದರಿಂದ ಒಂದು ವಿಷಯ ಸುಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ರಾಜ್ಯದಲ್ಲಿ ಸಾರ್ವಜನಿಕರಿಂದ ಚುನಾಯಿಸಲ್ಪಟ್ಟದ್ದು ಈ ಸದನ. ಹಾಗಿರು ಈ ಸದನಕ್ಕೆ ಸರ್ಕಾರ ಗೌರವ ಕೊಡದೆ ಪರಿಷತ್ತಿಗೆ ಮಹತ್ವವನ್ನು ಕೊಟ್ಟಿದೆ. ಪರಿಷತ್ತಿನ ಮಹತ್ವವನ್ನು ವರ್ಣನೆ ಮಾಡತಕ್ಕ ಯಾವನೇ ಆಗಲಿ, ಅವನು ಪ್ರಾಮಾಣಿಕತನದ ಸಮಾಜವಾದಿಯಾಗಲಾರ. ಈ ಪರಿಷತ್ತು ಎಂದು ಏನು ಕರೆಯುತ್ತೇವೆ, ಇದನ್ನು ಮೊದಲು ರದ್ದು ಮಾಡತಕ್ಕದ್ದು ಮೊಟ್ಟಮೊದಲಿನ ಕರ್ತವ್ಯ. ಅದನ್ನು ಮಾಡದೆ ಇದಕ್ಕೆ ಮಹತ್ವತೆಯನ್ನು ಕೊಟ್ಟದ್ದು ಪ್ರಜಾಪ್ರಭುತ್ವಕ್ಕೆ ಮಾಡಿದ ದ್ರೋಹ. ಈ ನೀತಿಯನ್ನು ಅನುಸರಿಸಿಕೊಂಡು ಬಜೆಟ್ ಚರ್ಚೆಯನ್ನು ಇಲ್ಲಿ ಮೊದಲು ಪ್ರಾರಂಭ ಮಾಡದೆ ಅಲ್ಲಿ ಮಾಡಿರುವ ಸರ್ಕಾರದ ಮನೋಭಾವಕ್ಕೆ ನನ್ನ ಧಿಕ್ಕಾರ. ಇನ್ನು ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಮುಂಚೆ ನಾನು ಈ ಮಂತ್ರಿಮಂಡಲದ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾದುದು ಅವಶ್ಯವೆಂದು ತಿಳಿಯುತ್ತೇನೆ. ಈಗ ಬಂದಿರತಕ್ಕಂತಹ ಮಂತ್ರಿಮಂಡಲ ಒಂದು ದೃಷ್ಟಿಯಲ್ಲಿ ಶೂದ್ರ ಸಚಿವ ಸಂಪುಟವೆಂದು ಹೇಳಬಹುದು. ಇದನ್ನು ನಾನು ಯೋಚನೆ ಮಾಡಿ ಹೇಳುತ್ತಿದ್ದೇನೆ. ಸ್ವಾಮಿ ವಿವೇಕಾನಂದರು ಹೇಳಿದ ಮಾತಿನಲ್ಲಿ ಕೂಡ ಇದು ನಿಜ. ಹಿಂದುಸ್ತಾನದಲ್ಲಿ ಮೊದಲು ನಾಲ್ಕು ವರ್ಣಗಳು ಇದ್ದವು. ಆದರೆ ಈಗ ಇಲ್ಲಿರುವುದು ಎರಡು ವರ್ಣಗಳು. ಅದು ವೈಶ್ಯ ವರ್ಣ ಮತ್ತು ಶೂದ್ರ ವರ್ಣ. ವೈಶ್ಯ ವರ್ಣವೆಂದರೆ ಈ ಬಂಡವಾಳ ಶಾಹೀ ವರ್ಗ. ಇನ್ನೊಂದು ಶೂದ್ರ ವರ್ಣ ಅಂದರೆ, ಸಮಾಜವಾದಿ ವರ್ಗ. ತಾವು ಸಮಾಜವಾದಿಗಳು ಎಂದು ಹೇಳಿ ಬಂದಿದ್ದೀರಿ. ಆದರೆ ಶೂದ್ರರಿಗೆ ನಿಜವಾಗಿ ಇರಬೇಕಾದಂತಹ ಸಿಟ್ಟು ಮತ್ತು ಕೆಚ್ಚು ನಿಮಗೆ ಇಲ್ಲ. ಆದ್ದರಿಂದ ನೀವು ಅರೆ ಶೂದ್ರರಾಗಿದ್ದೀರಿ. ಆದ್ದರಿಂದ ಪೂರ್ಣ ಶೂದ್ರ ಸಚಿವ ಸಂಪುಟ ಆಗಬೇಕು ; ಆದರೆ ಅದು ಆಗಲಿಲ್ಲ, ಆಗುವ ಸಂಭವವೂ ಇಲ್ಲ. ಅಧಿಕಾರ ಗದ್ದುಗೆಗೆ ಬಂದನಂತರ ತಮ್ಮಲ್ಲಿ ವೈರ್ಯಮನೋಭಾವ ತಳೆದು ಹಿಂದಿನ ಬಂಡವಾಳ ಶಾಹೀ ಮನೋಭಾವ ಬೆಳೆದಿದ್ದುದರಿಂದ ನಿಮ್ಮಲ್ಲಿ ನಮಗೆ ಸಂಪೂರ್ಣವಾದ ವಿಶ್ವಾಸ ಕಡಿದು ಹೋಗಿದೆ. ನಿಮ್ಮ ಮಂತ್ರಿಮಂಡಲದಲ್ಲಿರುವ ಮಂತ್ರಿಗಳು ಉದ್ದುದ್ದ ಭಾಷಣಗಳನ್ನು ಮತ್ತು ಹೇಳಿಕೆಗಳನ್ನು ಮಾಡಿ ಬರೆ ಮಾತಿನಲ್ಲಿ ಮಾತಾಗಿ ಬಿಟ್ಟಿದೆ. ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಟ್ಟ ಮುಖ್ಯಮಂತ್ರಿಯವರು

(ಶ್ರೀ ಕೋಣಂದೂರು ಲಿಂಗಪ್ಪ)

ಸಹಪ್ರತಿಯೊಂದಕ್ಕೂ ಮಾತನ್ನೇ ಆಡುತ್ತಿದ್ದಾರೆ. ಯಾವ ಪೋರ್ಟ್‌ಫೋಲಿಯೋದ ಮಂತ್ರಿಯ ಪ್ರಶ್ನೆಯೇ ಬರಲಿ, ಇವರು ಎದ್ದು ಬಿಟ್ಟು ಮಾತನಾಡುತ್ತಾರೆ. ಬರೀ ಮಾತು ಆದ್ದರಿಂದ ಪ್ರತಿಯೊಂದಕ್ಕೂ ಉದ್ದುದ್ದ ಹೇಳಿಕೆಗಳನ್ನು ಕೊಡತಕ್ಕ ಮತ್ತು ಭಾರೀ ಭಾಷಣಗಳನ್ನು ಮಾಡತಕ್ಕ ಮಂತ್ರಿಗಳಿಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ದಯವಿಟ್ಟು ನಿಮ್ಮ ಬಾಯನ್ನು ಮುಚ್ಚಿ ಇಂಗ್ಲೀಷನಲ್ಲಿ ಹೇಳುವುದಾದರೆ 'ಪ್ಲೀಸ್ ಯುಂ ಶಟ್ ಅಪ್' ಎಂಬ ಮಾತನ್ನು ಹೇಳುತ್ತೇನೆ. ಮೊದಲು ಬಾಯಿ ಮುಚ್ಚಿ ಎಷ್ಟು ನಿಮಗೆ ಹೇಳಬೇಕೋ ಅಷ್ಟನ್ನು ಮಾತ್ರ ಹೇಳುತ್ತೇನೆ. ಪ್ರತಿಯೊಂದಕ್ಕೂ ಹಿಂದೆ ನಡೆದಂಥ ಮಾತುಗಳನ್ನು ಹೇಳಬೇಡಿ ಎಂದು ಹೇಳಿದರೆ ಹೇಗೆ ? ಬರೀ ವಾಕ್ ರೂಪದಲ್ಲಿ ಹಾಲಿನ ಹೊಳೆಯನ್ನು ಹರಿಸುತ್ತಿದ್ದಾರೆ. ಸಂಕೀರ್ಣವಾಗಿ ಹಾಗೂ ಸಮಗ್ರವಾಗಿ ಹೇಳುವುದಾದರೆ, ಮಂತ್ರಿ ಮಂಡಲದ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಹುಂಬತನ, ದುರುದುಂಬತನ, ಪೆದ್ದುದುಂಬಿನಂತ ಅರೆ ಶೂದ್ರತನ, ಪೊಳ್ಳು ಘೋಷಣೆಯ ಗಾಳಿಜನ, ನೀತಿಶೂನ್ಯ ಈ ಮಂತ್ರಿಗಣ. ಇವರಿಂದ ಸಮಾಜವಾದವನ್ನು ಈ ರಾಜ್ಯದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಅರ್ಥಮಂತ್ರಿಗಳಾದ ಶ್ರೀ ಘೋರ್ಪಡೆಯವರು ಬಡ್ಜೆಟ್ ಭಾಷಣ ಮಾಡಿದ್ದಾರೆ. ನನಗೆ ಅವರ ಬಗ್ಗೆ ಬಹಳ ಗೌರವ ಇದೆ. ಆದರೆ ಅವರ ವಿಚಾರ ಹೊಂದಿಕೆಯ ಬಗ್ಗೆ ನನಗೆ ಆಕ್ರೋಶವಿದೆ. ಅವರು ಮಂಡಿಸಿರುವ ಬಡ್ಜೆಟ್ಟನ್ನು ನೋಡಿದರೆ ಪ್ರಾರಂಭದ ಪುಟದಿಂದ ಕಡೆಯ ಪುಟದವರೆಗೂ ಓದಿ ನೋಡಿದರೆ ಒಂದು ಕಡೆಯಾದರೂ ಸಮಾಜವಾದ ಎಂಬ ಶಬ್ದವನ್ನು ಹೇಳಿದ್ದಾರೆಯೇ ಎಂದು ನಾನು ಪ್ರಶ್ನೆಮಾಡುತ್ತೇನೆ. 36 ಪುಟಗಳಲ್ಲಿಯೂ ಒಂದು ಕಡೆಯಾದರೂ ಸಮಾಜವಾದ ಎನ್ನುವ ಒಂದು ಶಬ್ದವನ್ನು ಉಚ್ಚರಿಸಿಲ್ಲ. ಇವರು ಸ್ವತಃ ಮಾಜೀ ಮಹಾರಾಜರು. ಸೊಂಡೂರಿನಲ್ಲಿ ಇವತ್ತಿನವರೆಗೂ ಅಲ್ಲಿನ ಬಡವರಿಗೆ ಉಸಿರಾಡಲು ಬಿಟ್ಟಿಲ್ಲ. ರಾಜ ದರ್ಬಾರ್ ನಡೆಸುತ್ತಿದ್ದಾರೆ. ಆದರೆ ಅಲ್ಲಿ ಬಡವರು ಅಜ್ಞಾನ, ಅಂಧಕಾರದಲ್ಲಿದ್ದಹಾಗೆ ಇದ್ದಾರೆ. ಇಂತಹ ಮಾಜೀ ರಾಜರು ಇಲ್ಲಿ ಅರ್ಥ ಸಚಿವರಾಗಿ ಸಮಾಜವಾದವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ? ಬಡವರಿಗೆ ಮೋಸಮಾಡಿ ಕಣ್ಣು ಕಟ್ಟಿ ಸಮಾಜವಾದಿ ಎಂಬುದಾಗಿ ಮುಖವಾಡ ಹಾಕಿಕೊಂಡು ಮೆರೆಯುತಕ್ಕ ನಮ್ಮ ಅರ್ಥ ಮಂತ್ರಿಗಳ ಭಾಷಣದಲ್ಲಿ ಸಮಾಜವಾದ ಎಂಬ ಶಬ್ದ ಒಂದು ಕಡೆಯೂ ಅವರ ಭಾಷಣದಲ್ಲಿ ಬಾರದೇ ಇರುವುದಕ್ಕೆ ಏನಾದರೂ ಅರ್ಥವಿದೆಯೇ ಎಂದು ಕೇಳಬೇಕಾಗಿದೆ. ಅದು ಅನ್ವರ್ಥವಾಗಿದೆ. ಅವರು ಪರದೇಶಗಳಲ್ಲಿ ಹೋಗಿ ಓದಿ ಬಂದಂಥವರು. ನಮ್ಮ ರಾಜ್ಯದ ಒಳ್ಳೆಯ ಅರ್ಥಶಾಸ್ತ್ರಜ್ಞರಲ್ಲಿ ಇವರು ಒಬ್ಬರು. ನನಗೆ ಅವರ ಬಗ್ಗೆ ಹೆಚ್ಚಿಗೆ ಮೆಚ್ಚುಗೆ ಇದೆ. ಆದರೆ ಆ ವಿಚಾರದಲ್ಲಿ ಇವರು ಸಮಾಜವಾದಕ್ಕೆ ಬುದ್ಧಿಪೂರ್ವಕವಾಗಿ ಚೂರಿ ಹಾಕತಕ್ಕ ಜನರು. ಸೊಂಡೂರಿನ ಬಡವರು, ರೈತರು ಇವರ ಮುಂದೆ ಹೋಗಿ ಅವರ ಮುಖವಾಡವನ್ನೂ ಮತ್ತು ಅಲ್ಲಿನ ಜನರ ಭವಣೆಯನ್ನು ನೋಡಿ ಬಂದು ನಾನು ಒಂದು ಮಾತನ್ನು ಹೇಳುತ್ತೇನೆ. 23ನೇ ತಾರೀಖು ಸೊಂಡೂರು ವಿಮೋಚನಾ ಸ್ಮರಣ ಸಮಾರಂಭವನ್ನು ಬೆಂಗಳೂರಿನಲ್ಲಿ ಪ್ರಾರಂಭ ಮಾಡಲಿದ್ದೇವೆ. ಪ್ರಾರಂಭ ಮಾಡುತ್ತೇವೆ. ಅಂತೂ ಇಡೀ ರಾಷ್ಟ್ರದ ಎಲ್ಲಾ ಕಡೆಗಳಿಂದಲೂ ನಮ್ಮ ನಾಡಿಗೆ ಎಲ್ಲ ಪಕ್ಷದವರೂ ಹಾಗೂ ನಮ್ಮ ಪಕ್ಷದವರೆಲ್ಲರೂ ಬರುತ್ತಾರೆ. ಆಗ ನಿಮ್ಮ ಮಾಜೀ ಮಹಾರಾಜರು ಇಂದಿನ ಸಮಾಜವಾದಕ್ಕೆ ಮುಖವಾಡ ಹಾಕುವ ನಿಮ್ಮ ಅರ್ಥಮಂತ್ರಿಗಳ ನೈಜ ಚಿತ್ರವನ್ನು ಬಹಿರಂಗಪಡಿಸುತ್ತೇವೆ. ಈಗ ನಮಗೆ ಬೇಕಾದುದು ಸಮಾಜ ವಾದ. ಆದರೆ ಸೊಂಡೂರಿನ ಮಹಾರಾಜರ ಸಮಾಜವಾದ ಸೊಂಡೂರಿನ ಸಮಾಜವಾದ, ಇದು ನಿಜವಾದ ಸಮಾಜವಾದವೆಂದು ಹೇಳುತ್ತಾರೆ.

ಇನ್ನು ಬಡ್ಜೆಟ್ ಅಂದರೆ ಸಾಮಾನ್ಯವಾಗಿ ಅದರ ಡೆಫಿನಿಷನ್‌ನಿಂದ ಏನಾದರೂ ಪರಿಣಾಮವಾಗಬೇಕು. ಈ ವರ್ಷದಲ್ಲಿ ಮಂಡನೆ ಮಾಡಿರತಕ್ಕ ಬಡ್ಜೆಟ್ ಸಮಾಜದ ಮೇಲೆ ಪರಿಣಾಮವಾಗಬೇಕು. ಬಡ್ಜೆಟ್ ಮಂಡನೆ ಮಾಡುವ ಹಿಂದಿನ ದಿವಸ ಜನಗಳ ಮನಸ್ಸಿನಮೇಲೆ ಏನಿರುತ್ತದೆ, ಬಡ್ಜೆಟ್ ಭಾಷಣ ಮಾಡಿದ ಮರುದಿನ ಆಗತಕ್ಕ ಪರಿಣಾಮವೇನು—ಹೀಗೆ ಪ್ರತಿವರ್ಷವೂ ಹಂತಹಂತವಾಗಿ ಸಮಾಜವನ್ನು ಪ್ರವರ್ತಿಸತಕ್ಕ ಒಂದು ಆದೇಶವೇ ಈ ಬಡ್ಜೆಟ್. ಆದರೆ ಈಗ ಇಲ್ಲಿಟ್ಟಿರತಕ್ಕ ಬಡ್ಜೆಟ್ಟನ್ನು ನಾವು ನೋಡಿದರೆ ಕಳೆದ 25 ವರ್ಷಗಳಲ್ಲಿ ಮಾಡಿರತಕ್ಕ ಭಾಷಣಗಳನ್ನು ನೋಡಿದರೆ ಹಿಂದಿನ 10 ವರ್ಷಗಳಲ್ಲಿ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಏನು ಬಡ್ಜೆಟ್ಟನ್ನು ಮಾಡಿದ್ದರೋ ಅದೇ ಬಡ್ಜೆಟ್ ರೀತಿ ಇದೆ. ಆದರೆ ಇವರು ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಮತ್ತೇನೂ ವ್ಯತ್ಯಾಸವಿಲ್ಲ, ಮೂಲಭೂತವಾಗಿ ಇವರಿಗೂ ಅವರಿಗೂ ಯಾವ ವ್ಯತ್ಯಾಸವೂ ಇಲ್ಲ. ಆದ್ದರಿಂದ ನಾವು ಈಗ ಹೇಳುವುದೇನೆಂದರೆ, ಬಡವರಿಗೆ ಅದರಲ್ಲಿಯೂ ಸಾಮಾನ್ಯ ಜನರು ಪ್ರತಿನಿತ್ಯ ಬಳಸುವ ವಸ್ತುಗಳ ಮೇಲೆ ಸಮಾಜವಾದೀ ಬಡ್ಜೆಟ್ಟಿನಲ್ಲಿ ತೆರಿಗೆಯನ್ನು ಹಾಕಬಾರದು. ಏಕೆಂದರೆ ಇದು ಮಧ್ಯಮ

ವರ್ಗದ ಬಜೆಟ್ ಸ್ವಲ್ಪ ಶ್ರೀಮಂತ ವರ್ಗದವರ ಮೇಲೆ ಬರಬಹುದು. ಅವರಿಗೆ ತೆರಿಗೆ ಹಾಕಬಹುದು. ಆದ್ದರಿಂದ ಸಮಾಜವಾದಿ ರೂಪರೇಖೆಗಳು ಇದಕ್ಕೆ ತದ್ವಿರುದ್ಧವಾಗಿ ನಡೆದಿವೆ. ಇದರಲ್ಲಿ ಸಮಾಜವಾದ ಲಕ್ಷಣವು ಕಾಣದೇ ಇರುವ ರೀತಿಯಲ್ಲಿ ಈ ಬಜೆಟ್ ಮಂಡನೆ ಇವತ್ತು ಆಗಿದೆಯೆಂಬುದು ಮುಖ್ಯ ಸಮಾಜವಾದಿ ಬಜೆಟ್ ಎಂದು ಹೇಳಿದರೆ, ಅದರಲ್ಲಿ ಸರ್ಕಾರೀ ಕಾರ್ಖಾನೆಗಳು ಏನಿವೆಯೋ ಅವುಗಳಲ್ಲಿ ಹಣ ಹಾಕಿರುವುದು ಎಷ್ಟು ? ಆ ಹಣದಿಂದ ನಮಗೆ ಬಂದಿರುವ ಲಾಭವೆಷ್ಟು, ಆ ಲಾಭದಿಂದ ಅಭಿವೃದ್ಧಿ ಕೆಲಸಕ್ಕೆ ಎಷ್ಟು ತೊಡಗಿಸಿದೆ, ಹಾಗೆಯೇ ಬೇರೆಬೇರೆ ಮೂಲಗಳಿಂದ ಬರತಕ್ಕ ಉತ್ಪತ್ತಿ, ಸರ್ಕಾರದ ಕ್ಷೇತ್ರದಿಂದ ಬಂದಿರತಕ್ಕ ಉತ್ಪತ್ತಿ, ಅದರ ಖರ್ಚಿನ ವಿವರಗಳೇನೆಂಬ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಒಂದು ದೃಷ್ಟಿಯಿಂದ ಇದು ನಮ್ಮ ಡಿಕೆನ್ಸ್ ಸ್ಮಾಲ್ ಸ್ಟೋರಿ ಇದ್ದ ಹಾಗೆ ಇವೆ. ಇದರಲ್ಲಿ ಇಷ್ಟೇ ಹೊರತು ಇನ್ನೇನೂ ಮಹತ್ವವಿಲ್ಲ. ಇದನ್ನು ಅರ್ಥಶಾಸ್ತ್ರಜ್ಞರಾದ ಮಾನ್ಯ ಶ್ರೀ ಘೋರ್ಪಡೆಯವರು ಮಾಡಿದಂಥಾದ್ದು ಅಲ್ಲವೆಂದು ಕಾಣುತ್ತದೆ. ಇದನ್ನು ಕೇಸ ವರ್ಕರ್ಸ್ ಯಾರೋ ತಯಾರು ಮಾಡಿರಬೇಕು. ಸಮಾಜ ವಾದವನ್ನು ಹೇಳತಕ್ಕ ಅರ್ಥಮಂತ್ರಿಗಳು ಮಂಡನೆ ಮಾಡತಕ್ಕ ಬಜೆಟ್ ಇದು ಖಂಡಿತವಾಗಿಯೂ ಅಲ್ಲ.

ಇನ್ನು ಅಭಿವೃದ್ಧಿಯ ಬಗ್ಗೆ ಸಮಾಜವಾದೀ ಸರ್ಕಾರದ ಕಲ್ಪನೆ ಏನೆಂಬುದು ಇವರಿಗೆ ಆ ಕಲ್ಪನೆಯೇ ಇಲ್ಲ. ಇವತ್ತು ನಮ್ಮ ರಾಜ್ಯದ ಸರಾಸರಿ ತಲಾ ಉತ್ಪತ್ತಿ ಎಷ್ಟು ಎಂಬುದರ ಬಗ್ಗೆ ಅವರ ಭಾಷಣದಲ್ಲಿ ಎಲ್ಲಿಯೂ ಮಾಹಿತಿ ಇಲ್ಲ. ಅದರ ಬಗ್ಗೆ ಒಂದು ಅಕ್ಷರವೂ ಕಾಣುವುದಿಲ್ಲವೆಂದು ನಾನು ಹೇಳುತ್ತೇನೆ. ನಮ್ಮ ರಾಜ್ಯದ ಒಬ್ಬ ಮನುಷ್ಯನ ಒಂದು ದಿನದ ಆದಾಯ ಕೇವಲ 8ಆಣೆ. ನಾವು ಅನೇಕ ಲೆಕ್ಕಗಳನ್ನು ಪರಿಶೀಲನೆ ಮಾಡಿ ಅಂಕಿ ಅಂಶಗಳ ಆಧಾರದ ಮೇಲೆ ನಾವು ಈ ರೀತಿಯಾಗಿ ಲೆಕ್ಕ ಹಾಕಿದ್ದೇವೆ. ಇದು ಅಲ್ಲವೆಂದು ಹೇಳಿದರೆ ಹೇಗೆ ? ಅಂಕಿ ಅಂಶಗಳ ಮೂಲಕ ಹೇಳುತ್ತೇನೆ. 8ಆಣೆ ಪಡೆದಂಥ ಮನುಷ್ಯ ಈ ರಾಜ್ಯದಲ್ಲಿ ಬದುಕುತ್ತಿದ್ದಾನೆ. ಕಾರಣ ಇಷ್ಟೇ. ನಮ್ಮ ಜನರಿಗೆ ಸಿಟ್ಟು ಇಲ್ಲ. ಅವರು ಸಿಟ್ಟು ಮಾಡುವುದನ್ನು ಮರೆತಿದ್ದಾರೆ. ಆದ್ದರಿಂದ ಅವರು ಸತ್ತಜನರು ಆಗಿದ್ದಾರೆ, ನಮ್ಮ ಮಾನ್ಯ ಶ್ರೀ ಬೇಂದ್ರೆಯವರು ಒಂದು ಕವನವನ್ನು ಹಾಡಿದ್ದಾರೆ. 'ಇಳಿದು ಬಾ ತಾಯೇ, ಇಳಿದು ಬಾ, ತಾಯೇ ನಡೆದು ಬಾ, ಎಂದು. ಸತ್ತ ಜನರನ್ನು ಎತ್ತಿ ಬಾ ಎಂದು ಕರೆದುದಾಗಿದೆ. ಅಂತಹ ಚೈತನ್ಯ ರೂಪವಾದ ಶಕ್ತಿ ನಮ್ಮಲ್ಲಿ ಬರಬೇಕು. ಆದ್ದರಿಂದಲೇ ನೀವು ಈಗ ಇಂದು ಅಧಿಕಾರ ಗದ್ದುಗೆಯಲ್ಲಿ ಉಳಿದುಕೊಂಡಿದ್ದೀರಿ, ಆದರೆ ನಿಮ್ಮ ಪೋಲೀಸ್ ನಾಯಿಗೆ ಒಂದು ದಿನಕ್ಕೆ 5 ರೂಪಾಯಿಗಳಷ್ಟು ಖರ್ಚಾಗುತ್ತದೆ. ತಾವೇ ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ನಿಮ್ಮ ಪೋಲೀಸ್ ನಾಯಿಗೆ 5 ರೂಪಾಯಿಗಳನ್ನು ಖರ್ಚುಮಾಡುವ ನೀವು ಈ ರಾಜ್ಯದ ಒಬ್ಬ ಮನುಷ್ಯನಿಗೆ ಎಷ್ಟು ಒಂದು ದಿವಸಕ್ಕೆ ಖರ್ಚುಮಾಡುತ್ತೀರಿ ಎಂಬುದನ್ನು ತಾವು ಕೊಟ್ಟಿಲ್ಲ. 8 ಆಣೆ ಮಾತ್ರ ಈ ರಾಜ್ಯದಲ್ಲಿ ಒಬ್ಬ ಮನುಷ್ಯನಿಗೆ ಸರಾಸರಿ ಇರತಕ್ಕ ಉತ್ಪತ್ತಿ.

ಶ್ರೀ ಡಿ. ಬಿ. ಕಲ್ಮಣಕರ್.—ಪರ್ ಕ್ಯಾಪಿಟಾ ಇನ್‌ಕಂ 480.

ಶ್ರೀ ಕೋಣಂದೂರು ಲಿಂಗಪ್ಪ.—ಅದು ಸರಿಯಲ್ಲ.

(Madam Speaker in the Chair.)

ಇನ್ನು ಈ ಭಾಷಣದಲ್ಲಿ ಈ ಆಯವ್ಯಯ ಪಟ್ಟಿಯನ್ನು ಕ್ಷಾಮದ ಆಯವ್ಯಯ ಪತ್ರ ಎಂದು ಕರೆದಿದ್ದಾರೆ; ಆದರೆ ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಕಳೆದ 25 ವರ್ಷಗಳಿಂದಲೂ ಆಡಳಿತವರ್ಗದವರು ಕೃಷಿರಂಗವನ್ನು ನಿರ್ಲಕ್ಷಿಸಿದ್ದೇ ಇಂದು ದೇಶದಲ್ಲಿ ಕ್ಷಾಮ ತಲೆದೋರುವುದಕ್ಕೆ ಮೂಲಕಾರಣ ಎಂದು ಹೇಳದೆ ವಿಧಿಯಿಲ್ಲ. ಆಯಿತು 25 ವರ್ಷಗಳ ಆಡಳಿತ ಸರಿಯಾಗಿರಲಿಲ್ಲ ಎಂದು ಟೀಕೆ ಮಾಡತಕ್ಕ ಇಂದಿನ ಆಡಳಿತವರ್ಗದವರಾದರೂ ಕಳೆದ 11 ತಿಂಗಳಲ್ಲಿ ಇವರಾದರೂ ಮಾಡಿರತಕ್ಕದ್ದೇನು ? ಹಿಂದೆ ಇದ್ದವರೇನೋ ಮಾಡಿದ್ದೆಲ್ಲಾ ಪಾಪದ ಹೊರೆಯೆಂದು ಹೇಳತಕ್ಕ ಜನರು ಇಂದು ಇವರು ಕಳೆದ ಹನ್ನೊಂದು ತಿಂಗಳಲ್ಲಿ ಸಾಧಿಸಿರತಕ್ಕ ಪುಣ್ಯದ ಹೊರೆಯಾದರೂ ಏನು ? ತಿಳಿಸುವರೆ ? ದುಡ್ಡನ್ನೇನೋ ಅಗಾಧವಾಗಿ ಖರ್ಚುಮಾಡಿದ್ದಾರೆ. ಆದರೆ ದೇಶದಲ್ಲಿ ಆ ಬರ ಬಾರದಂತೆ ಕ್ರಮಗಳನ್ನು ಕೈಗೊಳ್ಳತಕ್ಕ ಬಗ್ಗೆ ಜನರಲ್ಲಿ ಒಂದು ಪ್ರಜ್ಞೆಯನ್ನು ಮೂಡಿಸುವುದಕ್ಕೆ ಸರ್ಕಾರದವರು ಕೈಗೊಂಡಿರತಕ್ಕ ಕಾರ್ಯಕ್ರಮಗಳೇನು ? ಈ ಶಾಸನ ಸಭೆಯ ಮುಂದೆ ಅಂಥಾ ಯಾವ ಯೋಜನೆಯನ್ನು ಮಂಡಿಸಿಲ್ಲ. ಹೋಗಲಿ ಇಂಥ ಒಂದು ಆಂದೋಳನವನ್ನು ಆ ಕ್ಷಾಮಪೀಡಿತ ಪ್ರದೇಶಗಳಾದ ಬೀದಾರ್, ಗುಲ್ಬರ್ಗ, ರಾಯಚೂರು ಇತ್ಯಾದಿ ಜಿಲ್ಲೆಗಳಲ್ಲಿ ನಡೆಸಬಹುದಾಗಿತ್ತು. ಇಂಥ ಒಂದು ದುರಂತಕಾಲದಲ್ಲಿ ಜನರಲ್ಲಿ ಒಂದು ಹೊಸ ಪ್ರಜ್ಞೆಯನ್ನು ಮೂಡಿ

ಶ್ರೀ ಕೋಣಂದೂರು ಲಿಂಗಪ್ಪ)

ಸುವುದಕ್ಕೆ ಸಾಧ್ಯವಿತ್ತು; ಅದರಿಂದ ದೇಶಕ್ಕೂ ಅನುಕೂಲವಾಗುತ್ತಿತ್ತು. ಅದನ್ನು ಮಾಡಿದ್ದರೆ ಇಂದು ಒಂದು ಹೊಸ ಸಮಾಜವನ್ನೇ ಅಲ್ಲಿ ಸೃಷ್ಟಿಮಾಡಬಹುದಾಗಿತ್ತು. ಅವರೆ ಜನರಲ್ಲಿ ಅಂಥಾ ಒಂದು ಸಾಮೂಹಿಕ ಪ್ರಜ್ಞೆ ಬೆಳೆಸುವುಕ್ಕೆ ಸರ್ಕಾರದವರು ಏನೇನೂ ಕೆಲಸ ಮಾಡಿಲ್ಲ. ಮಾಡುವುದಕ್ಕೆ ಇವರಿಗೆ ಸಾಧ್ಯವಿತ್ತು. ಅಲ್ಲಿ ಒಂದು ಭೂಸೈನ್ಯವನ್ನಾದರೂ ನಿರ್ಮಾಣ ಮಾಡಬಹುದಿತ್ತು. ಅದನ್ನಾದರೂ ಮಾಡಿದ್ದರೆ ಅದೊಂದು ಹೊಸ ಸಮಾಜಕ್ಕೆ ಬುನಾದಿಯಾದರೂ ಆಗುತ್ತಿತ್ತು. ಅದನ್ನೂ ಕೂಡ ಸರ್ಕಾರ ಮಾಡಲಿಲ್ಲ. ಹೀಗೆ ಸರ್ಕಾರ ನಮ್ಮ ರಾಜ್ಯದಲ್ಲಿ ಅನ್ನ ಕ್ಷಾಮವನ್ನು ಉಳಿಸಿಕೊಂಡು ಬರುತ್ತಿರುವಂತೆ ಅನಕ್ಷರಸ್ಥರ ಸಮಸ್ಯೆಯನ್ನೂ ಹಾಗೇ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇನ್ನು ಕನ್ನಡ ಭಾಷಾಭಿವೃದ್ಧಿಗೆ ಈ ಸಾಲಿಗೆ 13 ಲಕ್ಷ ರೂಪಾಯಿ ಮಾತ್ರ ಇಟ್ಟಿದ್ದಾರೆ. ಹಿಂದೆ ಇಟ್ಟಿದ್ದುದಕ್ಕಿಂತ ಈ ವರ್ಷ ಇದು ಬಹಳ ಕಡಮೆ ಆಗಿದೆ. ಆದುದರಿಂದ ಇದನ್ನು ಮತ್ತೆ ಒಂದು ಲಕ್ಷ ರೂಪಾಯಿಗೆ ಏರಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇಷ್ಟನ್ನು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಆರ್. ರಾಚೇಗೌಡ (ಹಾನೂರ್).—ಮಾನ್ಯ ಸಭಾಧ್ಯಕ್ಷರೇ, ಈಗ ಸಭೆಯ ಮುಂದೆ ಏನು ನಮ್ಮ ಮಾನ್ಯ ಅರ್ಥ ಸಚಿವರು 1973-74 ಕ್ಕೆ ಒಂದು ಆಯವ್ಯಯ ಪಟ್ಟಿಯನ್ನು ಮಂಡಿಸಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಅರ್ಥ ಮಂತ್ರಿಗಳು ತಮ್ಮ ಭಾಷಣದ ಮೊದಲನೇ ಪುಟದಲ್ಲೇ ಅಭಾವ ಪರಿಸ್ಥಿತಿಯ ಬಗ್ಗೆ ಅನೇಕ ವಿಷಯಗಳನ್ನು ಬಹಳ ಚನ್ನಾಗಿ ಪ್ರಸ್ತಾಪಮಾಡಿದ್ದಾರೆ. ಆದರೆ ಇದನ್ನು ಗಣನೆಗೆ ತೆಗೆದುಕೊಳ್ಳದೆ ವಿರೋಧ ಪಕ್ಷದ ಸದಸ್ಯರುಗಳು ಅಭಾವ ಪರಿಸ್ಥಿತಿಯ ಬಗ್ಗೆ ಸರ್ಕಾರ ಸಾಕಷ್ಟು ಪರಿಹಾರಗಳನ್ನು ಒದಗಿಸಿಲ್ಲ ಎಂದು ಹೇಳಿರತಕದ್ದು ನನಗೆ ಬಹಳ ಆಶ್ಚರ್ಯವನ್ನು ಉಂಟುಮಾಡಿದೆ. ಆ ಅಭಾವ ಪ್ರದೇಶಗಳಲ್ಲಿ 54 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಆ ಪ್ರದೇಶದಲ್ಲಿ ಹೋದ ವರ್ಷ ನಡೆಸಿರತಕ್ಕ ಕೆಲಸ ಕಾರ್ಯಗಳಿಗೂ ಈ ವರ್ಷ ಅಲ್ಲಿ ನಡೆಸಿರತಕ್ಕ ಕೆಲಸಕಾರ್ಯಗಳಿಗೂ ಹೋಲಿಸಿ ನೋಡಿದರೆ ಅಲ್ಲಿ ಈ ವರ್ಷ ಹೆಚ್ಚು ಹಣವನ್ನು ಖರ್ಚುಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಆದರೆ ನಾನು ಈಗ ನಮ್ಮ ಹಿಂದೆ ಇದ್ದ ಸರ್ಕಾರಗಳು ಏನೂ ಮಾಡಲಿಲ್ಲ ಎಂಬ ವಿಷಯಕ್ಕೆ ನಾನೀಗ ಪ್ರವೇಶಮಾಡುವುದಿಲ್ಲ. ಹಾಲಿ ಆ ಬೀದಾರ್, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಏನು ಒಂದು ಬರ ಬಂದಿದೆ ಅದು ಹೀಗೇ ಹತ್ತು ವರ್ಷಗಳಿಗೊಮ್ಮೆ ಬರುತ್ತಿರುತ್ತೆಂದು ಆ ಭಾಗದ ಜನರಿಂದ ನಾನು ಕೇಳುತ್ತಿದ್ದೇನೆ. ಅಂದಾಗ ಹಿಂದೆ ಇದ್ದಂಥ ಮಾನ್ಯ ಮಂತ್ರಿಗಳು ಆ ಅಭಾವ ಪ್ರದೇಶಗಳಿಂದಲೇ ಬಂದವರಾಗಿದ್ದರೂ ಅಲ್ಲಿ ಅದನ್ನು ತಡೆಯತಕ್ಕ ಬಗ್ಗೆ ಏನೊಂದೂ ಶಾಶ್ವತವಾದ ಕಾರ್ಯಕ್ರಮಗಳನ್ನು ಅವರು ಕೈಗೊಳ್ಳಲಿಲ್ಲ. ಅವರು ಈ ಬಗ್ಗೆ ಏನಾದರೂ ಒಂದು ಕ್ರಮವನ್ನು ಹಾಕಿಕೊಂಡು ಕೆಲಸ ನಡೆಸಿದ್ದರೆ ಚೆನ್ನಾಗಿತ್ತು. ಆದರೆ ಆ ಹಿಂದಿನ ಸರ್ಕಾರಗಳೆಲ್ಲಾ ಒಟ್ಟು ಖರ್ಚುಮಾಡಿರತಕ್ಕ ಹಣವನ್ನು ನಾವು 1966-67 ರಿಂದ 1971-72ಕ್ಕೆ ಲೆಕ್ಕ ಹಿಡಿದರೆ ಅದೂ ಬಹಳವೆ ಆಗುತ್ತದೆ. ಆದರೆ ಅಲ್ಲಿ ಕ್ಷಾಮ ಪರಿಹಾರದ ಬಗ್ಗೆ ಅಷ್ಟೊಂದು ಹಣವನ್ನು ಖರ್ಚುಮಾಡಿದ್ದರೂ ಅಲ್ಲಿ ಈ ದಿವಸ ಜನರಿಗೇನೂ ಕಷ್ಟ ತಪ್ಪಲಿಲ್ಲ. ಅದಕ್ಕೆ ಕಾರಣ ಆ ಹಿಂದಿನವರು ಅಲ್ಲಿ ಆ ಕ್ಷಾಮದ ಬಗ್ಗೆ ಖರ್ಚುಮಾಡಿದ ಹಣವನ್ನು ನೀರಾವರಿ ಬಾಬುಗಳಿಗೆ ವಿನಿಯೋಗ ಮಾಡದೆ ಆ ಹಣ ವನ್ನು ರಸ್ತೆ ರಿಪೇರಿ ಇತ್ಯಾದಿಗಳಿಗೆ ವೆಚ್ಚ ಮಾಡಿದ್ದರಿಂದ ಜನಕ್ಕೆ ಈ ದಿವಸ ಆ ತೊಂದರೆಗಳು ಉಂಟಾಗುವುದಕ್ಕೆ ಕಾರಣವಾಗಿದೆ. ಅಲ್ಲಿ ನೀರಾವರಿ ಕಾಮಗಾರಿಗಳನ್ನು ಅಭಿವೃದ್ಧಿಮಾಡಿದ್ದರೆ ಈ ವರ್ಷ ಅಲ್ಲಿ ಕ್ಷಾಮಬರುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಈ ಅಂಶವನ್ನು ನಮ್ಮ ಸರ್ಕಾರ ಗಮನಕ್ಕೆ ತಗೆದುಕೊಂಡು ಅಲ್ಲಿ ಈಗ 54 ಕೋಟಿ ರೂಪಾಯಿಗಳನ್ನು ಸಣ್ಣ ನೀರಾವರಿ ಮತ್ತು ಮಧ್ಯಮನೀರಾವರಿ, ಬಾಬುಗಳಿಗೆ ಖರ್ಚುಮಾಡುವುದಕ್ಕೆ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅಲ್ಲದೆ ದೊಡ್ಡ ನೀರಾವರಿ ಯೋಜನೆ ಗಳಿಗೂ ಕೂಡ ಹಣವನ್ನು 1.1 ಕೋಟಿ ರೂಪಾಯಿಗಳ ವರೆಗೂ ಒದಗಿಸುವುದಕ್ಕೆ ಪ್ರಯತ್ನಮಾಡು ತ್ತಿದ್ದಾರೆ. ಇದನ್ನು ಗಮನಿಸದೆ ವಿರೋಧ ಪಕ್ಷದ ಸದಸ್ಯರು ಮಾತನಾಡಿದ್ದು ಸರಿಯಲ್ಲ ಎಂದು ಈ ಒಂದು ಅಂಶವನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಇನ್ನು ಆ ಕ್ಷಾಮಕ್ಕೆ ತುತ್ತಾಗಿರತಕ್ಕ 4-5 ಜಿಲ್ಲೆಯಲ್ಲಿರತಕ್ಕ ಜನರಿಗೆ ಅಂದರೆ ನೇಕಾರರಿಗೆ ನೂಲನ್ನು ಒದಗಿಸುವುದಕ್ಕಾಗಿ 55 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಅಲ್ಲದೆ ಅವರು ತಯಾರಿಸಿದ ಬಟ್ಟೆಗಳನ್ನು ಕೊಳ್ಳುವುದಕ್ಕೂ ಕೂಡ ವ್ಯವಸ್ಥೆ ಮಾಡಿದ್ದಾರೆ. ಈ ವಿಚಾರವನ್ನು ವಿರೋಧ ಪಕ್ಷದವರು ಗಮನಿಸಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಸರ್ಕಾರ ಜನವಸತಿ ಸೌಕರ್ಯವನ್ನು ಉಂಟುಮಾಡುವುದಕ್ಕೆ ಐದು ಕೋಟಿ ರೂಪಾಯಿಗಳನ್ನು ಒದಗಿಸಿದೆ. ಆದರೆ ಒಂದೊಂದು ತಾಲ್ಲೂಕಿನಲ್ಲೂ 100–150 ಮನೆಗಳನ್ನು ಕಟ್ಟಿಸಬೇಕೆಂದು ಹೇಳಿದ್ದಾರೆ. ಆದರೆ ಅವು ಏತಕ್ಕೂ ಸಾಲದು, ಆದುದರಿಂದ ಪ್ರತಿ ಒಂದು ತಾಲ್ಲೂಕಿನಲ್ಲೂ ಕನಿಷ್ಠಪಕ್ಷ 500 ಮನೆಗಳನ್ನಾದರೂ ಕಟ್ಟಿಸುವುದಕ್ಕೆ ಹಣವನ್ನು ಒದಗಿಸಬೇಕಾದ್ದು ಅಗತ್ಯ ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಆಹಾರದ ವಿಷಯ ಹೇಳುವುದಾದರೆ ನಮ್ಮಲ್ಲಿ 13 ಲಕ್ಷ ಟನ್ ಆಹಾರದ ಕೊರತೆ ಇದೆ ಎಂದು ಹೇಳಲಾಗಿದೆ. ಆ ಕೊರತೆಯನ್ನು ನಮ್ಮ ಸರ್ಕಾರ ಮಾಡಿದ್ದಲ್ಲ. ಅದು ಕೇವಲ ಮಳೆಯ ಅಭಾವದಿಂದುಂಟಾದ ಪರಿಸ್ಥಿತಿ. ಇದನ್ನು ವಿರೋಧಪಕ್ಷದವರು ಅರಿತುಕೊಳ್ಳಬೇಕು. ಬಹುಶಃ ಚೆನ್ನಾಗಿ ಮಳೆಯಾಗಿದ್ದರೆ ಈ ಕೊರತೆ ಬರುತ್ತಿರಲಿಲ್ಲ, ಬೆಳೆ ಚೆನ್ನಾಗಿ ಆಗಿ ಆಹಾರದಲ್ಲಿ ಸ್ವಯಂ ಸಂಪೂರ್ಣತೆ ಬರುತ್ತಿತ್ತು. ನಮ್ಮ ವ್ಯವಸಾಯಾಭಿವೃದ್ಧಿಯಾಗಬೇಕಾದರೆ ನೀರು ಮತ್ತು ಗೊಬ್ಬರ ಇವೆರಡೂ ಮುಖ್ಯವಾದುವು. ನೀರಿನ ಆವಶ್ಯಕತೆ ಮನಗಂಡು ಕಪಿನಿ ಹಾರಂಗಿ ಮುಂತಾದ ಅನೇಕ ಪ್ರಾಜೆಕ್ಟುಗಳನ್ನು ತೆಗೆದುಕೊಂಡಿದ್ದಾರೆ. ಅಭಾವ ಪರಿಸ್ಥಿತಿ ಇರುವ ಪ್ರದೇಶಗಳಲ್ಲೂ ಹೆಚ್ಚು ನೀರಾವರಿ ಯೋಜನೆಗಳನ್ನು ಕೈಕೊಂಡಿದ್ದಾರೆ. ಗೊಬ್ಬರ ಕಡಮೆ ಒದಗುತ್ತಿದೆ. ಆದುದರಿಂದ ಕೈಗಾರಿಕಾ ಮಂತ್ರಿಗಳಲ್ಲಿ ವಿನಂತಿಮಾಡುವುದು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರಕಾರ ಮಂಜೂರುಮಾಡುವ ಗೊಬ್ಬರದ ಕಾರ್ಖಾನೆಗಳ ಜೊತೆಗೆ ಇನ್ನೂ ಎರಡುಮೂರು ಹೆಚ್ಚು ಕಾರ್ಖಾನೆಗಳನ್ನು ಪಡೆಯಲು ಪ್ರಯತ್ನ ಮಾಡಬೇಕು ಎಂದು.

5-00 P. M.

ನಮ್ಮ ಸರಕಾರಿ ನೌಕರರಿಗೆ 30 ರೂಪಾಯಿಗಳಿಂದ 40 ರೂಪಾಯಿಗಳವರೆಗೆ ಹೆಚ್ಚಿಸಿದ್ದಾರೆ. ಆದರೆ ವಿರೋಧ ಪಕ್ಷದವರು ಇದು ಕಡಮೆ ಎಂದು ಲಘುವಾಗಿ ಮಾತನಾಡಿದ್ದಾರೆ. ಸರಕಾರ ಈ ದೇಶದಲ್ಲಿ ಸಾಕಷ್ಟು ಮುನ್ನಡೆದಿದೆ ಎಂದು ನಾನಾದರೂ ಹೇಳುತ್ತೇನೆ. ಕನ್ನಡದ ಬೆಳವಣಿಗೆಗೆ ಬಹಳ ಕಡಮೆ ಕೊಟ್ಟಿದ್ದಾರೆಂದು ತಿಳಿಸಿದ್ದಾರೆ. ರಾಜ್ಯದಲ್ಲಿ ಎಲ್ಲಾ ಕಡೆ ಕನ್ನಡಭಾಷೆ ಬಳಸುವಂತೆ ಮತ್ತು ಕನ್ನಡವನ್ನು ಕೋರ್ಟ್ ಲಾಂಗ್ವೇಜ್ ಮಾಡುವಂತೆ ಕ್ರಮ ತೆಗೆದುಕೊಳ್ಳಬೇಕು.

ನಾನು ರೇಷ್ಮೆ ವಿಷಯದಲ್ಲಿ ಸ್ವಲ್ಪ ಮಾತನಾಡಬೇಕಾಗಿದೆ. ರೇಷ್ಮೆ ಬೆಲೆ ಹೆಚ್ಚಿದೆ, ಇದರಿಂದ ಬಟ್ಟೆ ನೇಯುವವರಿಗೆ ತೊಂದರೆಯಾಗಿದೆ, ಕಡಮೆಮಾಡಬೇಕು ಎಂದು ಹೇಳಿದರು. ಕಷ್ಟಪಟ್ಟು ದುಡಿದು ಸುಮಾರು ಒಂದು ತಿಂಗಳು ರಕ್ಷಣೆಮಾಡಿದರೆ 10–15 ಮಣ ಗೂಡು ದೊರೆಯುವುದು. ಅವರಿಗೆ ಸರಿಯಾದ ಪ್ರತಿಫಲವಿಲ್ಲದಿರುವಾಗ ಹೆಚ್ಚು ಬೆಲೆ ಬೇಡ ಎಂದರೆ ಹೇಗೆ ? ಈಗ ಗುಲ್ಬರ್ಗ, ಬಿದರೆ ಮುಂತಾದ ಕಡೆಗಳಲ್ಲಿ ಬರಗಾಲ ಪ್ರಾಪ್ತವಾಗಿದೆ. ರೇಷ್ಮೆ ಕೆಲವು ಕಡೆ ಬೆಳೆಯುತ್ತಿರುವುದರಿಂದ ಮತ್ತು ಅದಕ್ಕೆ ಬೆಲೆ ಹೆಚ್ಚಿರುವುದರಿಂದ ಬರಗಾಲವಿದ್ದರೂ ಕೆಲವರಿಗೆ ಅನುಕೂಲವಾಗಿದೆ. ಕೆಲವು ಕಡೆ ಎರಡಾಣೆ ಬೆಳೆ ಕೂಡ ಆಗಿಲ್ಲ, ಮಳೆಯೇ ಇಲ್ಲ, ಅಂಥ ಕಡೆ ರೇಷ್ಮೆ ಬೆಳೆಯುವುದರಿಂದ ಸ್ವಲ್ಪ ಅನುಕೂಲವಾಗಿದೆ. ಹಾಗಿರುವಾಗ ರೇಷ್ಮೆ ಬೆಲೆ ಕಡಮೆ ಮಾಡಬೇಕೆಂದು ಹೇಳುವುದು ಸಲ್ಲದು. ಕೆಲವರಿಗೆ ಕೊಳ್ಳಲು ಶಕ್ತಿಯಿಲ್ಲ, ಅಂಥವರಿಗೆ ಸೊಸೈಟಿ ಮಾಡಿ ಅಥವ ಸಿಲ್ಕ್ ಫಿಲೇಚರಿನಲ್ಲಿ ಲೂಮ್ಸ್ ಜಾಸ್ತಿ ಮಾಡಿ ನೇಕಾರರಿಗೆ ಕೆಲಸ ಕೊಟ್ಟು ಅವರನ್ನು ಕಾಪಾಡಬೇಕೇ ಹೊರತು ಬೆಲೆ ಕಡಮೆ ಮಾಡಿದರೆ ನಿಜವಾಗಿಯೂ ಅದರಲ್ಲಿ ನಿರತರಾಗಿರುವವರಿಗೆ ಕೆಡಕು ಮಾಡಿದಂತಾಗುವುದು. ರೇಷ್ಮೆ ಕೈಗಾರಿಕೆ ಅಭಿವೃದ್ಧಿಯಾಗಲು ಅದರಮೇಲಿರುವ ಎಲ್ಲ ತೆರಿಗೆಗಳನ್ನೂ ತೆಗೆದುಹಾಕಬೇಕು. ಈ ಕೈಗಾರಿಕೆ ಅಭಿವೃದ್ಧಿಯಾದಾಗ ಯಾವ ತೆರಿಗೆ ಬೇಕಾದರೂ ಹಾಕಿ. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಕೆ. ಎಂ ದೊರೆಸ್ವಾಮಿ ನಾಯ್ಡು (ಬೇತಮಂಗಲ).—ಸನ್ಮಾನ್ಯ ಅಧ್ಯಕ್ಷರೇ, ಅರ್ಥ ಸಚಿವರು ಮಂಡಿಸಿರುವ ಆಯವ್ಯಯ ಪಟ್ಟಿಯ ಬಗ್ಗೆ ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಮೈಸೂರು ದೇಶದಲ್ಲಿ 8 ಜಿಲ್ಲೆಗಳಲ್ಲಿ ಹೆಚ್ಚು ಅಭಾವ ಪರಿಸ್ಥಿತಿ ಇದೆಯೆಂದು ಅಲ್ಲಿ ಮಾತ್ರ ಪರಿಹಾರ ಕಾರ್ಯಗಳನ್ನು ಕೈಕೊಂಡಿದ್ದಾರೆ, ಹೆಚ್ಚು ಜನರಿಗೆ ಕೆಲಸ ಕೊಡುತ್ತಿದ್ದಾರೆ. ಮೊದಲಿಂದಲೂ ಕೋಲಾರ ಜಿಲ್ಲೆ ಬರಗಾಲ ಪರಿಸ್ಥಿತಿಯನ್ನು ದುರಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ಲ. ಇದನ್ನು ಗಮನಿಸಿ ಅಲ್ಲೂ ಕೂಡ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು.

ವ್ಯವಸಾಯಕ್ಕೆ ಕೋಟ್ಯಾಂತರ ರೂಪಾಯಿ ಖರ್ಚುಮಾಡುತ್ತಿರುವುದಾಗಿ ತಿಳಿಸಿದ್ದಾರೆ ಆದರೆ ನಿಜವಾಗಿಯೂ ವ್ಯವಸಾಯಮಾಡುವವರಿಗೆ ಸರಿಯಾದ ಸಹಾಯ ದೊರೆಯುತ್ತಿಲ್ಲ.

(ಶ್ರೀ ಕೆ. ಎಂ. ದೊರೆಸ್ವಾಮಿ)

ಇದು ಎಲ್ಲರಿಗೂ ಗೊತ್ತಿರುವ ವಿಚಾರ. ದೇಶದಲ್ಲಿ ಸೇಕಡ 80 ಮಂದಿ ವ್ಯವಸಾಯಗಾರರಾಗಿದ್ದಾರೆಂದು ಲೆಕ್ಕದಲ್ಲಿದ್ದರೂ ಸೇಕಡ 20 ಮಂದಿ ಮಾತ್ರ ವ್ಯವಸಾಯವಮಾಡುತ್ತಿದ್ದು ಉಳಿದ 80 ಜನರು ವ್ಯಾಪಾರ, ಬೇರೆ ನೌಕರಿ ಮುಂತಾದುವುಗಳಲ್ಲಿ ತೊಡಗಿದ್ದಾರೆ. ಇದರಿಂದ ಆಹಾರದ ಅಭಾವ ಹೆಚ್ಚುತ್ತಿದೆ. ಎಲ್ಲರಿಗೂ ಸುಖಜೀವನ ಸಾಗಿಸಬೇಕೆಂಬ ಹಂಬಲ ಜಾಸ್ತಿಯಾಗಿದೆ, ಇದರಿಂದ ವ್ಯವಸಾಯದ ಕೆಲಸಮಾಡುವವರಿಗೆ ಕಷ್ಟವಾಗಿದೆ. ಅನೇಕರು ವ್ಯವಸಾಯದ ಕೆಲಸ ಬಿಟ್ಟು ಬೇರೆ ಉದ್ಯೋಗಗಳಲ್ಲಿ ತೊಡಗುತ್ತಿದ್ದಾರೆ, ಅವರು ಪಟ್ಟಣಗಳಿಗೆ ಸುಖಜೀವನ ನಡೆಸಲು ಬರುತ್ತಿದ್ದಾರೆ. ಆದುದರಿಂದ ಇದನ್ನು ತಪ್ಪಿಸಿ ಆಹಾರದ ಕೊರತೆ ನೀಗಲು ಪ್ರತಿಯೊಂದು ತಾಲ್ಲೂಕಿನಲ್ಲೂ ವ್ಯವಸಾಯದ ಕಾಲೇಜನ್ನು ತೆರೆದು ಹೆಚ್ಚು ಜನರನ್ನು ಅಲ್ಲಿ ವಿದ್ಯಾವಂತರನ್ನಾಗಿ ಮಾಡಿ ಅಲ್ಲಿ ಕಲಿತ ತರುಣರು ಹಳ್ಳಿಗಳಲ್ಲಿ ನೆಲಸಿ ವ್ಯವಸಾಯವಮಾಡುವಂತೆ ಪ್ರೋತ್ಸಾಹ ನೀಡಬೇಕು.

ಭೂಸಾರ ಸಂರಕ್ಷಣೆ ವಿಚಾರ. ಇದಕ್ಕೆ ಕೋಟಿಗಟ್ಟಲೆ ಹಣ ಖರ್ಚಾಗುತ್ತಿದೆ, ರೈತರು ಇದರ ಬಗ್ಗೆ ಖರ್ಚುಮಾಡುವ ಹಣವನ್ನು ವಾಪಸು ಕೊಡಬೇಕಾಗುವುದೆಂದು ತಿಳಿಯದೆ ಅಭಾವ ಕಾಮಗಾರಿಗಳ ಹಣದಿಂದ ಈ ಕೆಲಸವಮಾಡುತ್ತಿದ್ದಾರೆಂದು ಭಾವಿಸಿದ್ದಾರೆ. ಸರ್ಕಾರದವರು ಮುಂದೆ ಒಡ್ಡುಗಳು ಹಾಕುತ್ತಾ ಹೋಗುತ್ತಿದ್ದಾರೆ; ಹಿಂದುಗಡೆ ಒಡ್ಡುಗಳನ್ನು ಹೊಡೆದು ಚದರ ಮಾಡುತ್ತಾರೆ, ಇದರಿಂದ ಲಕ್ಷಗಟ್ಟಲೆ ಹಣ ಪೋಲಾಗುವುದು. ಮೊದಲು ಹಳ್ಳ ಕಡೆ ಮಾಡಿರುವ ಕೆಲಸಗಳನ್ನು ನೋಡಿದರೆ ಇದು ಗೊತ್ತಾಗುವುದು. ಇದಕ್ಕೆ ಮಾಡುವ ಖರ್ಚನ್ನು ನೀರಾವರಿ ಅಂದರೆ, ಕೆರೆ ಕಟ್ಟೆ ನಾಲೆ ಒಡ್ಡು ಮುಂತಾದುವುಗಳಿಗೆ ಉಪಯೋಗಿಸಿದರೆ ನೀರಾವರಿಗೆ ಅನುಕೂಲವಾಗುವುದು. ಮೈನರ್ ಇರಿಗೇಷನ್‌ಗೆ ಒದಗಿಸಿರುವ ಹಣ ಸಾಲದು.

ಸಹಕಾರ ಸಂಘ. ಇವು ಮೊದಲಿನಿಂದಲೂ ಸರಿಯಾಗಿ ಕೆಲಸಮಾಡುತ್ತಿಲ್ಲ. ಅನೇಕ ಸಂಘಗಳು ದಿವಾಳಿಯಾಗಿವೆ. ಈ ಸಂಘಗಳಲ್ಲಿ ಸಾಲ ತೆಗೆದುಕೊಂಡಿರುವುದನ್ನು ಐದಾರು ವರ್ಷಗಳಾದರೂ ವಸೂಲುಮಾಡುತ್ತಿಲ್ಲ. ವಸೂಲಿ ಕ್ರಮ ಕಾಲಕ್ಕೆ ಸರಿಯಾಗಿ ತೆಗೆದುಕೊಳ್ಳದೆ ಒಂದೇ ಸಲ ಜಪ್ತಿ ವಗೈರೆ ಮಾಡಿ ಪಂಪುಸೆಟ್ಟು, ದನಕರುಗಳು ಮುಂತಾದುವುಗಳನ್ನು ವಶಪಡಿಸಿಕೊಂಡು ಅವಮಾನ ಮಾಡುತ್ತಿದ್ದಾರೆ. ಕಾಲು ಭಾಗ, ಅರ್ಧ ಭಾಗ ಪಾವತಿ ಮಾಡಿದರೂ, ಜಪ್ತಿ ಮಾಡಿರುವ ಸ್ವತ್ತುಗಳನ್ನು ವಾಪಸ್ ಕೊಡಿ ಎಂದರೂ ಸಹ ವಾಪಸು ಕೊಡದೆ ತೊಂದರೆ ಕೊಡುತ್ತಾ ಇರುತ್ತಾರೆ. ವರ್ಷಗಟ್ಟಲೆ ಸುಮ್ಮನೆ ಇದ್ದು ಬಿಟ್ಟು ಒಂದೇ ಸಲ ವಸೂಲಿಗೆ ಹೋಗಿ, ಮಳೆಬೆಳೆ ಇಲ್ಲದ ಕಾಲದಲ್ಲಿ ಈ ರೀತಿ ತೊಂದರೆ ಕೊಟ್ಟು ವಸೂಲಿ ಮಾಡುವುದು ಆಶ್ಚರ್ಯವಾಗಿದೆ. 2-3 ಕಂತುಗಳ ಮೂಲಕ ವಸೂಲು ಮಾಡಲು ಆದೇಶ ಕೊಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದೇಶದಲ್ಲಿ ಅರಣ್ಯ ಸಂಪತ್ತು ದಿನೇ ದಿನೇ ಕ್ಷೀಣವಾಗುತ್ತಿದೆ. ಅರಣ್ಯ ಸಂಪತ್ತನ್ನು ಹೆಚ್ಚು ಮಾಡಲು ಪ್ರೋತ್ಸಾಹಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಮತ್ತು ದೇಶದಲ್ಲಿ ಪಶುಸಂಪತ್ತೂ ಕ್ಷೀಣವಾಗುತ್ತಿದೆ. ದನಗಳ ಮೇವಿಗಾಗಿ ಹೊಸ ಹುಲ್ಲು ಬೆಳೆಯುಲಿಕ್ಕೆ ಬಾವಿಗಳನ್ನು ತೆಗೆಯುವುದಕ್ಕೆ ಹಣದ ಸಹಾಯ ಪಡೆಯಲು ಅವಕಾಶವನ್ನು ಮಾಡಿಕೊಡಬೇಕು. ಇದಕ್ಕೆ ಸಬ್ಸಿಡಿ ಮೂಲಕ ಧನ ಸಹಾಯ ಮಾಡಿ ಪ್ರತಿಯೊಂದು ಹೋಬಳಿಯಲ್ಲಿಯೂ ಬಾವಿಗಳನ್ನು ತೆಗೆಯಲು ಹೆಚ್ಚಾಗಿ ಹಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಪಿ. ಹೆಗರೆ (ಚಿಕ್ಕೋಡಿ)—ಮಾನ್ಯ ಅಧ್ಯಕ್ಷಿಣಿಯವರೇ, ನಮ್ಮ ಮಾನ್ಯ ಅರ್ಥ ಸಚಿವರು ಈ ಸದನದ ಮುಂದೆ ಇಟ್ಟ 1973-74 ನೇ ಸಾಲಿನ ಆಯವ್ಯಯ ಪತ್ರವನ್ನು ನಾನು ಸ್ವಾಗತಿಸುತ್ತಾ ಈ ಬಗ್ಗೆ ಕೆಲವು ಸಲಹೆಗಳನ್ನು ಮಾಡಬಯಸುತ್ತೇನೆ. ಈ ಈ ಆಯವ್ಯಯ ಪಟ್ಟಿಯ ವಿಷಯ ಬಗ್ಗೆ ಮಾತನಾಡುವ ಮೊದಲು ಈ ವರ್ಷ ನಮ್ಮ ರಾಜ್ಯದಲ್ಲಿ ತೊಂದರೆಗೆ ಈಡಾದ ಬರಗಾಲದ ಪರಿಸ್ಥಿತಿಯ ವಿಷಯ ಮಾತನಾಡಲು ಬಯಸುತ್ತೇನೆ. ಬರಗಾಲದ ವಿಷಯದಲ್ಲಿ ವಿರೋಧಿ ಮಿತ್ರ ಸದಸ್ಯರು ಕಟುವಾಗಿ ಟೀಕಿಸಿದ್ದಾರೆ. ಇದು ನೈಸರ್ಗಿಕ ಕೋಪ ನಾವು ಎಂದೂ ನೋಡದ ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಈ ಬರಗಾಲದಲ್ಲಿ ತೊಂದರೆಗೀಡಾದ ಜನಕ್ಕೆ, ಸಂಕಷ್ಟದಲ್ಲಿರುವವರಿಗೆ ಆಹಾರ ಒದಗಿಸುವುದು, ನೀರು ಒದಗಿಸುವುದು, ದನಗಳಿಗೆ ಮೇವು ಒದಗಿಸುವುದು, ಈ ಎಲ್ಲವನ್ನೂ ಒದಗಿಸುವುದರಲ್ಲಿ ಸರ್ಕಾರ ಹಿಂದೆ ಬಿದ್ದಿಲ್ಲ, ಸರ್ಕಾರ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿದೆ. 23 ಕೋಟಿ ರೂಪಾಯಿ ತನಕ ಹಣವನ್ನು ಖರ್ಚು ಮಾಡಿದೆ. ಇವತ್ತು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದು ಸದಸ್ಯರಿಗೆ ಗೊತ್ತಿರಬೇಕು, ನಮ್ಮ ತಾಲ್ಲೂಕಿನಲ್ಲಿ ನೀರು ಇಲ್ಲ ಎಂದು ಹೇಳಿದ ತಕ್ಷಣ, ಎಲ್ಲಿ ನೀರು ಇದೆಯೋ ಅಲ್ಲಿಂದ

ತಂದು ಒದಗಿಸುತ್ತೇವೆಂದು ಮಂತ್ರಿಗಳು ವಚನ ಕೊಟ್ಟಿದ್ದಾರೆ. ಇಷ್ಟು ಕಾರ್ಯವನ್ನು ನಮ್ಮ ಸರ್ಕಾರದವರು ಮಾಡಿದರೂ ಕೂಡ ಏನೂ ಕಾರ್ಯ ಮಾಡಿಲ್ಲ ಎಂದು ಟೀಕಿಸುವುದು ಸರಿಯಲ್ಲ. ಯಾವ ಸರ್ಕಾರವೂ ಕೂಡ ಎಲ್ಲರನ್ನು ಸುಖವಾಗಿಡುವುದಕ್ಕೆ ಸಾಧ್ಯವಿಲ್ಲ. ದೇವರಿಂದಲಾದರೂ ಸಾಧ್ಯವಿಲ್ಲ. ಮಳೆಯಿಲ್ಲದ ಹೊರತು ಜನರಿಗೆ ಸುಖ ಸಂತೋಷ ಕೊಡಲು ಸಾಧ್ಯವಿಲ್ಲ. ಈ ಆಯ ವ್ಯಯ ಪತ್ರದ ವಿಷಯದಲ್ಲಿ ವಿಶೇಷವಾಗಿ ಕೆಲವೊಂದು ಮಾತುಗಳನ್ನು ಆಡಲು ಬಯಸುತ್ತೇನೆ. ಇದರಲ್ಲಿ ಮೊದಲನೆಯ ವಿಚಾರ, ಈ ಸರ್ಕಾರ ಘೋಷಿಸಿದ್ದು ಸಮಾಜವಾದವನ್ನು ಜಾರಿಗೆ ತರುತ್ತೇವೆ, ದಾರಿದ್ರ್ಯವನ್ನು ದೂರ ಮಾಡುತ್ತೇವೆ, ಎಂದು. ಈ ವಿಷಯದಲ್ಲಿ ನಮ್ಮ ಸರ್ಕಾರದವರು ಜನರಿಗೆ ಏನು ಸಹಾಯ ಮಾಡಿದ್ದಾರೆ ಎಂದು ನೋಡುವುದಾದರೆ, ಕುಟುಂಬದ ಪೆನ್‌ಷನ್ ವೇತನವನ್ನು 30 ರೂಪಾಯಿ ಇದ್ದುದನ್ನು 40 ರೂಪಾಯಿಗೆ ಏರಿಸಿದ್ದಾರೆ. ಕೆಳಗಿನ ಜನಗಳಿಗೆ ಇನ್ನೂ ಸೌಲಭ್ಯಗಳನ್ನು ಮಾಡುವ ಯೋಚನೆ ನಮ್ಮ ಸರ್ಕಾರದವರಿಗೆ ಇದೆ. ಇದು ಬಡತನವನ್ನು ನಿರ್ಮೂಲನ ಮಾಡುವುದಕ್ಕೆ ಒಂದು ಉಪಾಯ. 1200 ರೂಪಾಯಿ ಒಳಗಿನ ನೌಕರರಿಗೆ ತುಟ್ಟಿ ಭತ್ಯವನ್ನು ಕೇಂದ್ರ ಸರ್ಕಾರದ ನೌಕರರ ಜೊತೆಗೆ ಸೇರಿಸಿದ್ದಾರೆ. ಬಡತನವನ್ನು ನಿರ್ಮೂಲನ ಮಾಡಬೇಕಾದರೆ, ಸಮಾಜವಾದವನ್ನು ಜಾರಿಗೆ ತರಬೇಕಾದರೆ, ಕೆಳಗಿನ ವರ್ಗದವರು ಅಭಿವೃದ್ಧಿಯಾಗಬೇಕು. ಈ ಮಾತನ್ನು ಮಹಾತ್ಮ ಗಾಂಧಿಯವರು ಹೇಳಿದರು, ಯಾವ ಕಾರ್ಯ ಮಾಡಿದರೂ ಸಹ ಬಡ ರೈತ, ಬಡ ಕೂಲಿಗಾರರು ಏನು ಇದ್ದಾರೆ ಅವರನ್ನು ಅಭಿವೃದ್ಧಿ ಮಾಡುವುದನ್ನು ವಿಚಾರ ಮಾಡಿ ಆ ಕೆಲಸವನ್ನು ಮಾಡಿರಿ. ಈಗ ಸಮಾಜವಾದವನ್ನು ನೀವು ಘೋಷಣೆ ಮಾಡಿದ್ದೀರಿ, ಬಡತನ ನಿರ್ಮೂಲನ ಮಾಡುವ ಘೋಷಣೆ ಮಾಡಿದ್ದೀರಿ, ಕೆಳಗಿನ ವರ್ಗದ ಜನಕ್ಕೆ ಭತ್ಯ ಹೆಚ್ಚು ಮಾಡಿ ಅವರದನ್ನೇ ಆಧರಿಸಿ 1200 ರೂಪಾಯಿಗಳ ಪಗಾರದವರಿಗೂ ಕೂಡ ಭತ್ಯವನ್ನು ಹೆಚ್ಚು ಮಾಡಿರುವುದರ ಅರ್ಥ ಏನು ಎಂದು ಗೊತ್ತಾಗುವುದಿಲ್ಲ.

ಸರ್ಕಾರ ನೀರಾವರಿ ವಿಷಯದಲ್ಲಿ, ವಿದ್ಯುಚ್ಛಕ್ತಿ ವಿಷಯದಲ್ಲಿ ಸಾಕಷ್ಟು ಯೋಜನೆಗಳನ್ನು ಕೈಗೊಂಡಿದೆ. ಸರ್ಕಾರದ ಯೋಜನೆಯ ಪ್ರಕಾರ ಐದು ವರ್ಷಗಳಲ್ಲಿ ನಮ್ಮಲ್ಲಿ ಏನೂ ವಿದ್ಯುತ್ ಇಲ್ಲದ ಗ್ರಾಮಗಳು ಇವೆಯೋ ಆ ಎಲ್ಲಾ ಗ್ರಾಮಗಳಿಗೂ ವಿದ್ಯುತ್ ಕೊಡುವ ಭರವಸೆಯನ್ನು ಕೊಟ್ಟಿದ್ದಾರೆ. ಅದೇ ರೀತಿ ನೀರಾವರಿ ಯೋಜನೆಯನ್ನು ಕೈಗೊಂಡಿದ್ದಾರೆ. ಭಾರಿ ನೀರಾವರಿ ಯೋಜನೆ ಮಧ್ಯಮ ತರಗತಿಯ ನೀರಾವರಿ ಯೋಜನೆಗಳನ್ನು ತೆಗೆದುಕೊಂಡು, ಈಗ ಏನು ನೀರಾವರಿ ಸೌಲಭ್ಯ ಇದೆಯೋ ಅದಕ್ಕಿಂತ ಮೂರರಷ್ಟು ನೀರಾವರಿ ಕೊಡುವ ಯೋಜನೆಯನ್ನು ನಮ್ಮ ಸರ್ಕಾರದವರು ಇಟ್ಟುಕೊಂಡಿದ್ದಾರೆ. ಇಷ್ಟಾದರೂ ಸಹಿತ ನಾವು ಒಂದು ವಿಚಾರವನ್ನು ಮಾಡಬೇಕಾಗುತ್ತದೆ, ಇಷ್ಟು ನಮ್ಮ ದೇಶದಲ್ಲಿ ಪ್ರಗತಿಯನ್ನು ಸಾಧಿಸಿದರೂ ಕೂಡ ಈ ಸೌಲಭ್ಯ ಯಾರಿಗೆ ಹೋಗುತ್ತಿದೆ ? ಇದನ್ನು ನಾವು ಸ್ವಲ್ಪ ವಿಚಾರ ಮಾಡಬೇಕು, ಸರ್ಕಾರದವರು ವಿಚಾರ ಮಾಡಬೇಕಾಗುತ್ತದೆ. ಮತ್ತು ನಾವೆಲ್ಲರೂ ವಿಚಾರ ಮಾಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಕಳೆದ 25 ವರ್ಷಗಳಲ್ಲಿ ಏನೂ ಪ್ರಗತಿಯಾಗಿಲ್ಲ ಎಂದು ಯಾರೂ ಹೇಳಲಾರರು. ಸೌಲಭ್ಯಗಳು ಒದಗಿವೆ, ಆದರೆ ಅವುಗಳು ಆಸ್ತಿವಂತರಿಗೆ, ಹಣ ಇದ್ದವರಿಗೆ ಹೋಗಿವೆ. ಮೂಲಭೂತವಾದ ಸಮಸ್ಯೆಯಾದ ಬಡತನವನ್ನು ನಿರ್ಮೂಲ ಮಾಡುತ್ತೇವೆ ಎನ್ನುವ ಘೋಷಣೆಯನ್ನು ಮಾಡಿದ್ದೇವೆ, ಸಮಾಜವಾದವನ್ನು ತರುತ್ತೇವೆ ಎನ್ನುವ ಘೋಷಣೆ ಇದೆ, ಆದರೆ ಈ ಘೋಷಣೆಗೆ ಅನುಗುಣವಾಗಿ ಏನೂ ಆಗುತ್ತಿಲ್ಲ. ಇದು ಅತ್ಯಂತ ದುಃಖದ ಸಂಗತಿ. ಯಾರಿಗೆ ಬಡತನ ಇದೆ ಅವರು ಬಡವರಾಗಿಯೇ ಇರುತ್ತಾರೆ, ಶೇಕಡ 40 ರಷ್ಟು ಜನಕ್ಕೆ ಎರಡು ಹೊತ್ತು ಊಟಕ್ಕೆ ಸಿಕ್ಕುವುದಿಲ್ಲ. ಶೇಕಡ 60 ರಷ್ಟು ಜನ ತೊಂದರೆಯಲ್ಲಿದ್ದಾರೆ. ಇಂಥ ಜನರ ಪ್ರಶ್ನೆಯನ್ನು ಹೇಗೆ ಬಿಡಿಸಿಕೊಳ್ಳಬಹುದು ಎಂದು ವಿಚಾರ ಮಾಡಬೇಕು. ಇದರ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆಯೋ ? ಇಲ್ಲಿಯತನಕ ಲ್ಯಾಂಡ್ ರಿಫಾರಂ್ಸ ಮಾಡಬೇಕು ಎಂದು ಸರ್ಕಾರದ ಜಮೀನು ಎಲ್ಲಿ ಇದೆಯೋ ಅಲ್ಲಿ ಭೂಮಿ ಇಲ್ಲದವರಿಗೆ ಕೊಡಬೇಕು, ಉತ್ಪಾದನೆ ಹೆಚ್ಚಿಗೆ ಮಾಡಬೇಕು ಎಂದು ಮಾತನಾಡುತ್ತಾ ಬಂದಿದ್ದೇವೆ. ನಮ್ಮ ಲ್ಯಾಂಡ್ ರಿಫಾರಂ್ಸ ತಂದರೂ ಸಹಿತ ಭೂಹೀನ ಜನರಿಗೆ, ಕೂಲಿಗಾರರಿಗೆ, ಒಂದು ಗುಂಟೆ ಜಮೀನು ಸಿಕ್ಕುವುದಿಲ್ಲ ಎಂದು ಸ್ಪಷ್ಟವಾಗಿದೆ. ಆ ಜನಕ್ಕೆ ಏನಾದರೂ ಉಪಾಯ ಮಾಡಲೇಬೇಕು, ಹಾಗಾದರೆ ಏನು ಮಾಡಬೇಕು, ಇದಕ್ಕೆ ಉಪಾಯ ಏನೆಂದರೆ, ಕೂಲಿ ಮಾಡುವವನ ಪಗಾರವನ್ನು ಹೆಚ್ಚು ಮಾಡಬೇಕು, ಉಪಜೀವನಕ್ಕೆ ಏನಾದರೂ ಸಾಧನೆಯನ್ನು ತೋರಿಸಿಕೊಡಬೇಕು. ನಮ್ಮ ದೇಶದಲ್ಲಿ ಸಮಾಜವಾದವನ್ನು ತರಬೇಕು ಎಂದು ಸರ್ಕಾರ ಉದ್ದೇಶ. ಆದರೆ, ಜಾತಿ ವಗೈರೆ, ಸ್ವಜನ ಪಕ್ಷಪಾತ, ಇವೆಲ್ಲ ಆ ಕಾರ್ಯದಲ್ಲಿ ಅಡ್ಡಿಯಾಗುತ್ತಲಿವೆ ಈ ಆತಂಕಗಳನ್ನು ಸರ್ಕಾರದವರು ನಿರ್ಮೂಲನ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದನ್ನು ಸರ್ಕಾರದವರು ನಿರ್ಮೂಲನ ಮಾಡುವುದಕ್ಕೆ

(ಶ್ರೀ ಪಿ. ಪಿ. ಹೆಗರೆ)

ಹೋಗುವ ಮೊದಲು, ನಮ್ಮ ಹಿಂದೂಸ್ಥಾನದಲ್ಲಿ ಈ ಅಸ್ಪೃಶ್ಯತೆ ಏನು ಇದೆ, ಒಬ್ಬ ಮನುಷ್ಯನನ್ನು ಇನ್ನೊಬ್ಬ ಮನುಷ್ಯ ಮುಟ್ಟಕೂಡದು ಎಂದು ಏನು ಇದೆ ಇದು ಬಹಳ ದೊಡ್ಡದು, ಇದನ್ನು ನಿವಾರಣೆ ಮಾಡಬೇಕು. ಇದಕ್ಕಾಗಿ ಮಾನ್ಯ ಮಂತ್ರಿಗಳು ಬಡ್ಜೆಟ್ಟಿನಲ್ಲಿ 50 ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. ಇದರಿಂದ ಏನಾಗುತ್ತದೆ ? ಸರ್ಕಾರದವರು ಅಸ್ಪೃಶ್ಯತೆ ನಿವಾರಣೆಯ ಬಗ್ಗೆ ಕಾಯಿದೆ ಮಾಡಿದ್ದಾರೆ, ಅದರಿಂದ ಏನೂ ಸಾಧನೆಯಾಗಲಿಲ್ಲ. ಆ ಬಗ್ಗೆ ನಮ್ಮ ಲೀಡರ್ ಅವರು ಕಳೆದ ವರ್ಷದಲ್ಲಿ ಸುಮಾರು 50 ಕೇಸುಗಳನ್ನು ರಿಜಿಸ್ಟರ್ ಮಾಡಿದ್ದೇವೆ ಎಂದು ಈ ಸದನದಲ್ಲಿ ಹೇಳಿದರು. ಈ ರೀತಿಯಿಂದ ಅಸ್ಪೃಶ್ಯತೆ ಹೋಗಲು ಸಾಧ್ಯವಿಲ್ಲ. ಏನು ಮಾಡಬೇಕುಎಂಬುದನ್ನು ನೋಡಬೇಕು. ಇಲ್ಲಿ ನನಗೆ ಲಿಯೋ ಟಾಲಸ್ಟಾಯ್ ಅವರು ಹೇಳಿದ ಮಾತು ನೆನಪು ಬರುತ್ತದೆ. ಈಗ ಜನ ಸೂರ್ಯ, ಚಂದ್ರರ ಮೇಲೆ ಹೋಗುವ ಕಾಲ ಬಂದಿದೆ. ಸೈನ್ಸ್‌ನ ಪ್ರಗತಿ ಇಷ್ಟರ ಮಟ್ಟಿಗೆ ಆಗಿದೆ, ಇದನ್ನು ನೆನಸಿ ಅವರು ಇನ್ನು ಮೇಲೆ ಎಲ್ಲ ಶಾಸ್ತ್ರವನ್ನು ಬಂದು ಮಾಡಿರಿ, ಒಬ್ಬ ಮನುಷ್ಯ ಇನ್ನೊಬ್ಬನನ್ನು ಹೇಗೆ ನೋಡಿಕೊಳ್ಳಬೇಕು, ಅವನಲ್ಲಿ ಹೇಗೆ ನಡೆದುಕೊಳ್ಳಬೇಕು ಎನ್ನುವ ಶಾಸ್ತ್ರವನ್ನು ಶೋಧನೆ ಮಾಡಿರಿ. ಇದು ಭಾರತೀಯರಿಗೆ ಉದ್ದೇಶಿಸಿ ಹೇಳಿದಂತಾಗಿದೆ. ಇದನ್ನು ಭಾರತೀಯರು ವಿಚಾರ ಮಾಡಬೇಕು. ಬಡತನ ನಿರ್ಮೂಲನ ಮಾಡಬೇಕು ಎನ್ನುವ ಘೋಷಣೆ ಮಾಡಿದ್ದೇವೆ. ಬಡತನ ನಿರ್ಮೂಲ ಮಾಡಬೇಕಾದರೆ ಒಂದೇ ಒಂದು ದಾರಿ ಸಮಾಜವಾದ. ನಾವು ನೀವು ಹೋಗತಕ್ಕಂಥ ದಾರಿಯಲ್ಲಿ ಕೆಲವರು ಅಸಮಾಧಾನ ಪಟ್ಟಿದ್ದಾರೆ. ನಮ್ಮ ಮುಂದಿನ ಯೋಜನೆ ಪ್ರಕಾರ ಯಾವನಲ್ಲಿ ಆಸ್ತಿ ಇದೆಯೋ ಯಾವನ ಆದಾಯ ಹೆಚ್ಚಿಗೆ ಇದೆಯೋ ಆ ಆಸ್ತಿ ಮೇಲೆ ಮಿತಿ ಹಾಕಲೇಬೇಕು. ಮತ್ತು ಆದಾಯದ ಮೇಲೆ ಮಿತಿ ಹಾಕಲೇ ಬೇಕಾಗುತ್ತದೆ. ಬಡತನ ನಿರ್ಮೂಲ ಮಾಡುವ ಸಲುವಾಗಿ ಇದನ್ನು ಮಾಡಬೇಕು. ಇನ್ನು ನಾನು 2—3 ಸೂಚನೆಗಳನ್ನು ಮಾಡಬಯಸುತ್ತೇನೆ. ಈಗ ನಮ್ಮ ಭೂಕಂದಾಯ ಎಷ್ಟೋ ಕಾಲದ ಹಿಂದೆ ನಮ್ಮ ಮೇಲೆ ಹಾಕಿದ್ದಾರೆ ಈಗ ಭೂಮಿ ಉತ್ಪತ್ತಿ ಎಷ್ಟು ಪಟ್ಟು ಹೆಚ್ಚಾಗಿದೆ ಕಾರಣ ಅದಕ್ಕೆ ಅನುಗುಣವಾಗಿ ಭೂಕಂದಾಯ ಹೆಚ್ಚಿಗೆ ಮಾಡಬೇಕು ಆಹಾರ ಧಾನ್ಯ ಮತ್ತು ಜೀವನಕ್ಕೆ ಅವಶ್ಯಕವಾಗಿ ಬೇಕಾದ ಎಲ್ಲಾ ವಸ್ತುಗಳ ಮೇಲೆ ಸರ್ಕಾರ ಹತೋಟಿ ಇಟ್ಟುಕೊಳ್ಳಬೇಕು. ಬಡ ಜನರಿಗೆ ತೊಂದರೆಯಾಗದಂತೆ ಆಹಾರ ಧಾನ್ಯಗಳು ಅವರಿಗೆ ಸಿಕ್ಕುವಂತೆ ಮಾಡಬೇಕು. ಬಡಜನರಿಗೆ ಯಾವತ್ತೂ ಸರ್ವೀಸಿನಲ್ಲಿ ಅವಕಾಶ ಸಿಕ್ಕಿಲ್ಲ. ಹರಿಜನಗಿರಿಜನರಿಗೆ ಸರಿಯಾದ ಅವಕಾಶ ಸಿಕ್ಕಿಲ್ಲ. ಈಗ ಸರ್ಕಾರದ ಖಾತೆಯಲ್ಲಿ ಸಹ ನಾಲ್ಕನೇ ದರ್ಜೆಗಳಲ್ಲಿ ಸಹ 18 ಪರ್ಸೆಂಟ್ ಕೊಟ್ಟಿಲ್ಲ. ಈ ರೀತಿ ಅನ್ಯಾಯ ಇರುವಾಗ ಪ್ರೈವೇಟ್ ಇಂಡಸ್ಟ್ರೀಸ್, ಪ್ರೈವೇಟ್ ಶಾಲಾ ಸಂಸ್ಥೆಗಳಲ್ಲಿ ಇನ್ನು ಸಾಕಷ್ಟು ಸ್ಥಾನ ಕೊಟ್ಟಿಲ್ಲ. ಸರ್ಕಾರ ಕಟ್ಟುನಿಟ್ಟಾಗಿ ನಿರ್ಧಾರ ಮಾಡಬೇಕು. ಯಾರಿಗಾದರೂ ಪ್ರೈವೇಟ್ ಶಾಲೆಗಳಿಗೆ ಮತ್ತು ಕಾಲೇಜುಗಳಿಗೆ ಉದ್ಯಮಗಳಿಗೆ ಲೈಸೆನ್ಸ್ ಕೊಡುವ ಮಟ್ಟದಲ್ಲಿ ಈ ಹರಿಜನಗಿರಿಜನ ಇಷ್ಟು ಪರ್ಸೆಂಟ್ ಕೊಟ್ಟರೆ ಲೈಸೆನ್ಸ್ ಕೊಡುತ್ತೇವೆ ಇಲ್ಲದಿದ್ದರೆ ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕು. ಕೊನೆಗೆ ನೋಡಿದರೆ ಜಾತಿ ಧರ್ಮ ಬಹಳ ದಿವಸ ಉಳಿಯಲಾರದು. ಧರ್ಮ ಅತಿರೇಕವಾದ್ದರಿಂದ ಪಾಕೀಸ್ಥಾನವಾಯಿತು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷಣಿಯವರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಕೆ. ಕುಲಕರ್ಣಿ (ನವಲಗುಂದ್).—ಮಾನ್ಯ ಅಧ್ಯಕ್ಷರೇ, ಈ ವರ್ಷದ ಆಯವ್ಯಯದ ಬಗ್ಗೆ ವಿರೋಧಿಸಿ ನಾನು ನಾಲ್ಕು ಸೂಚನೆಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ. ಮೊದಲನೆಯದಾಗಿ ನಮ್ಮ ತಾಲ್ಲೂಕು ಧಾರವಾಡ ಜಿಲ್ಲೆಯಲ್ಲಿ ಕ್ಷಾಮ ಪೀಡಿತ ಪ್ರದೇಶಗಳಿಗೆ ಒಂದು ಅಗದಿ ವರ ಮಲಪ್ರಭಾ ಯೋಜನೆ. ಈ ಮಲಪ್ರಭಾ ಯೋಜನೆ ಆದಷ್ಟು ತೀವ್ರಗತಿಯಿಂದ ಆಗಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅದು ಈಗ ಸದ್ಯ ಕಾರ್ಯ ನಡೆದಿದೆ. ಬಲದಂಡೆ ಕಾಲುವೆ ಕಾರ್ಯ ಆದಷ್ಟು ಬೇಗ ನಮ್ಮ ನವಲಗುಂದ ತಾಲ್ಲೂಕಿಗೆ ಬಹಳ ಉಪಯೋಗವಾಗುತ್ತದೆ ಅದರ ಸಲುವಾಗಿ ಬಲದಂಡೆ ಕಾಲುವೆ ಕಾರ್ಯ ಆದಷ್ಟು ತೀವ್ರಗತಿಯಿಂದ ತೆಗೆದುಕೊಳ್ಳಬೇಕು. ಕುಡಿಯುವ ನೀರಿನ ಸಲುವಾಗಿ ಇವೊತ್ತಿನ ದಿವಸ ಸ್ವತಃ ನಮ್ಮ ತಾಲ್ಲೋಕಿನಲ್ಲಿ ಒಂದು ಪರಿಸ್ಥಿತಿ ಉಂಟಾಗಿದೆ. ಏತಕ್ಕೆಂದರೆ ಅಲ್ಲಿ ಬಾವಿಗಳನ್ನು ತೆಗೆದರೂ ಸೌಳು ನೀರು ಇರುತ್ತದೆ. ಅದರ ಸಲುವಾಗಿ ನಮ್ಮ ತಾಲ್ಲೋಕಿನಲ್ಲಿ ಕೆರೆಗಳಿಂದ ಕುಡಿಯುವ ನೀರಿನ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ತಾವು ಅಲ್ಲಿಗೆ 1.5 ಕೋಟಿ ರೂಪಾಯಿ ಭಾವಿ ಸಲುವಾಗಿ ಇಟ್ಟಿದ್ದೀರಿ. ತಾವು ಅದನ್ನು ತಮ್ಮ ಬಡ್ಜೆಟ್‌ನೊಳಗೆ ನಮೂದು ಮಾಡಬೇಕು. ಅದರಲ್ಲಿ ಕುಡಿಯುವ ನೀರಿನ ಸಲುವಾಗಿ ನಮ್ಮ ತಾಲ್ಲೋಕಿಗೆ ಎಷ್ಟೋ ದಿವಸಗಳ ಲೆಕ್ಕದ

ಪ್ರಕಾರ ಇದು ದೊಡ್ಡ ಊರು ಅಣ್ಣಿಗೇರಿ. ಯಾವ ಹಣ ಇದುವರೆಗೆ ಖರ್ಚು ಮಾಡಿಲ್ಲ. ಆದಷ್ಟು ತೀವ್ರಗತಿಯಿಂದ ಸರ್ಕಾರ ಇದನ್ನು ಮನಸ್ಸಿಗೆ ತೆಗೆದುಕೊಂಡು ಕುಡಿಯುವ ನೀರಿನ ಬಗ್ಗೆ ಹಣವನ್ನು ಒದಗಿಸಬೇಕು. ಏನಾದರೂ ಸೌಕರ್ಯ ಬೇಗ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹುಡುಗರಿಗೆ ಸರ್ಕಾರಿ ಬೋರ್ಡಿಂಗ್‌ನಲ್ಲಿ ಈಗ 30 ರಿಂದ 40 ರೂಪಾಯಿಗೆ ಏರಿಸಿದೆ. ಆದರೆ 40 ರೂಪಾಯಿ ಸಾಲುವುದಿಲ್ಲ. ಇವೊತ್ತಿನ ದಿವಸ ಈ 40 ರೂಪಾಯಿ ಯಾವ ಕಾಲವಲ್ಲೋ ಏರಿಸಬೇಕಿತ್ತು ಈಗ 40 ರೂಪಾಯಿ ಮಾಡಿದ್ದಾರೆ ಇದು ಸಾಲುವುದಿಲ್ಲ. ಅಗದಿ ಕನಿಷ್ಟ ಪಕ್ಷ 50—60 ರೂಪಾಯಿ ಹುಡುಗರಿಗೆ ಕೊಟ್ಟರೆ ಅದು ಅನುಕೂಲವಾಗುತ್ತದೆ.

ಇನ್ನು ನವಲಗುಂದ ತಾಲ್ಲೋಕಿನೊಳಗೆ ನೇಕಾರ ಜನರು ಇದ್ದಾರೆ ಆದರಲ್ಲಿ ನರಗುಂದದಲ್ಲಿ ಸರ್ಕಾರೀ ಗೋಡೌನ್ ಮಾಡಿ ನೂಲಿನ ವಿತರಣೆ ಮಾಡಬೇಕು ಎನ್ನುವ ಬಗ್ಗೆ ಸರ್ಕಾರದ ಮುಂದೆ ಸೂಚನೆ ಇಡುತ್ತೇನೆ. ಈ ಮನೆಯಲ್ಲಿ ನಡೆದಂತಹ ಚರ್ಚೆಯಲ್ಲಿ ಮಸ್ಕಿಟ್ ವಿಚಾರ ತೆಗಿದಿದ್ದಾರೆ, ಹುಬ್ಬಳ್ಳಿ ಧಾರ್‌ವಾರ್ ಕಾರ್ಪೊರೇಷನ್‌ನಲ್ಲಿ ಮಸ್ಕಿಟೋ ಕಂಟ್ರೋಲ್ ಮಾಡುವ ಸಲುವಾಗಿ ಯೋಜನೆಯನ್ನು ಇದರ ಜೊತೆಯಲ್ಲಿ ಸೇರಿಸಿಕೊಳ್ಳಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† **Sri A. M. BELLIAPPA** (Mercara).—Madam Speaker, while supporting the Budget I thank for you having given me this opportunity to speak on the Budget placed by the Hon'ble Minister for Finance for the year 1973-74. From the last seven days we have been hearing speeches for and against the Budget presented by the Hon'ble Finance Minister. Many friends of mine on this side have said that it is a socialistic budget. But very strangely enough and surprisingly also, some of the friends from the Opposition have stated that it is non-socialistic, more exceptionally Sri Konandur Lingappa called it non-socialistic, because according to him not a single word 'socialism' is mentioned in the entire Budget. I am sorry, Madam, that some of the Opposition members, who have criticised this budget, have not realised the spirit with which this Budget is drafted. There are certain things in the Budget which goes to show that the budget is entirely socialistic. Which is the Government which has framed the scheme of giving sites to the houseless people in the past ?

For the last 25 years though there was lot of thinking for the removal of poverty and all help to be given to the poor people, no Government in the past had done anything to the poor people. The present Congress Government though holding the reigns for the last one year, has distributed 2½ lakhs of sites to the houseless people. Apart from this, our Finance Minister has provided Rs. 5 crores for the construction of houses to those poor people who have suffered all these years.

5-30 P. M.

Madam Speaker, I also join with the criticism made by some of our friends that there are some irregularities at the district level. Only for statistical purposes they have said that houses have been given to the poor people. The responsibility of the Government is to give direction to the District Officers for distribution of houses ; but the

(SRI A. M. BELLIAPPA)

District officers for statistical purposes they announce that so many sites have been distributed to the poor people. It is the duty of the Government to rectify the defects, if any, and the irregularities that are committed, atleast hereafter Government should take all possible care to see that these irregularities do not occur and see that really needy people are given house-sites. As already pointed out by some of my friends that some people have been given sites far away from the places of residence or far away from the places of their avocation. I might also say that this sort of distrsbution does not serve any useful purpose. I therefore request the Government to open their eyes and see that such criticisms by the members are avoided and they must also give a direction to the concerned officers that the allotment must be made correctly and do real justice to the people. Secondly, it is an age-old cry that the salary given to the Government servants is not sufficient to maintain themselves. Immediately our party took reigns of Government, they have given dearness allowance once in the month of July and another in the month of November 1972. Again it is very pleasant to note that our Government has increased the dearness allowance on par with the Central Government employees. My submission is that by enhancing the dearness allowance, no real purpose is served because six month's of D. A. will be credited to the P. F. account of the employees. The low paid officials and teachers were crying for D. A. If the D. A. is credited to their accounts, it would work as a great hardship to them. I therefore plead that the enhanced D. A. may be paid to them. Such of those officers and officials who are eligible to get Rs. 37.50 by way of D. A., their enhanced D. A. might be credited to the PF account.

With regard to the budget, the Finance Minister has really done well in removing the sales tax on certain items. I am sorry that the agriculturists are not helped to the extent that is required. The Finance Minister should have taken care to see that the entire sales tax on the pesticides and insecticides and on manures was removed in the interests of agriculturists. In order to held the poor, the sales tax on foodstuffs should have been removed. That would have served the purpose so far as the poor people are concerned.

Coming to the development activities, I might say that this budget is not only a socialist budget but also a drought development oriented budget. With regard to developments, my submission is this: so far as the minor and medium irrigation projects are concerned, Government should take all care to see that all these projects are executed. In Coorg District, the water that is there is being otherwise wasted. If small dams are put across the streams, we can double the food production. I therefore plead that more number of minor irrigation projects should be taken up in the district of Coorg.

A reference has been made in the budget that power cut has been imposed due to failure of monsoon. I request the Government to find out the real causes for the failure of monsoon. The Coorg District used to get 300-400'' of rainfall every year. But for the last few years, the rainfall has fallen to 250''. Why there has been a down fall in the rain in Coorg and other malnad parts of our State is a thing which is intriguing to my mind. To my mind the reason for the low rainfall is that too for the last 16 years, is due to eradication of forest.

In fact, in Coorg District, thousands of acres of forest area has been given to the industrialists which has resulted in the removal of forest. A few days ago, I had been to Talakaveri where the Cauvery river takes its birth. Formerly, the rainfall of that place was about 400''; now it has fallen to 220''. If the Government wants to see that the irrigation projects reservoirs are filled, they must stop cutting of forest.

Mercara town has been recognised by the Central Government as a Hill Station. The Central Government employees at Mercara are being paid Hill station allowance. Unfortunately our State Government employees are not paid that allowance. Besides, the Government servants working at Mercara are not being paid house-rent allowance whereas in all other Districts, such an allowance is being paid to the Government servants. The reason given by the State Government is that Mercara town is not having a population of more than 25,000, hence the Government servants are not eligible for house-rent allowance. The population of Mercara will not arise because there are hundreds of villages round about Mercara and it is very difficult to reach that figure. I therefore request the Government to give house-rent allowance to the Government servants working at Mercara. Thank you.

† ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನ ಹಳ್ಳಿ).—ಪೂಜ್ಯ ಅಧ್ಯಕ್ಷಿಣಿಯವರೇ, ಆರ್ಥಿಕ ಮಂತ್ರಿಗಳು ಮಂಡಿಸಿರತಕ್ಕ ಅಂದಾಜು ಆಯವ್ಯಯದ ಬಗ್ಗೆ ನಾನು ಎರಡು ಮಾತನಾಡಲಿಕ್ಕೆ ಇಚ್ಛೆ ಪಡುತ್ತೇನೆ. ಈಗಾಗಲೇ ಈ ಅಂದಾಜು ಪತ್ರಿಕೆಯಲ್ಲಿ ಬರಗಾಲಕ್ಕೆ ಒಳಗಾಗಿರುವ ಪ್ರದೇಶಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಒದಗಿಸಿರುವುದು ಒಳ್ಳೆಯದು ಎನ್ನುವುದನ್ನು ಒಪ್ಪುತ್ತೇನೆ. ಆದರೆ ಈ ಪ್ರದೇಶಗಳಲ್ಲದೆ ಹಳೇ ಮೈಸೂರಿನ ಅನೇಕ ಭಾಗಗಳಲ್ಲಿ ಭಾಗಶಃ ಬರಗಾಲ ಒದಗಿದೆ. ತುಮಕೂರು ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಕೆಲವು ಹೋಬಳಿಗಳಲ್ಲಂತೂ ಬರಗಾಲದ ದೆಸೆಯಿಂದ ಜನಗಳಿಗೆ ಕೆಲಸವಿಲ್ಲ, ತಿನ್ನುವುದಕ್ಕೆ ಆಹಾರವಿಲ್ಲ, ದನಗಳಿಗೆ ಮೇವು ಕೂಡ ಸಿಕ್ಕುವುದು ತೊಂದರೆಯಾಗಿದೆ. ಸರ್ಕಾರ ಇತ್ತ ಕಡೆ ಕೂಡ ಗಮನ ಹರಿಸಬೇಕು. ಅಲ್ಲದೆ ಮುಂದೆ ಇಂಥ ಬರಗಾಲ ಬಾರದೆ ಇರುವಂತೆ ನೀರಾವರಿ ಸೌಕರ್ಯಗಳನ್ನು ತುಮಕೂರು ಜಿಲ್ಲೆಯ ಚಿಕ್ಕನಾಯ್ಕನಹಳ್ಳಿ, ತುಮಕೂರು, ತಿಪಟೂರು, ಗುಬ್ಬಿ, ಸಿರಾ, ಪಾವಗಡ, ಮಧುಗಿರಿ ಈ ತಾಲ್ಲೂಕುಗಳಿಗೆ ಬರಗಾಲ ಆಗಾಗ ತುತ್ತಾಗುತ್ತಿರುವ ಭಾಗಗಳಿಗೆ ಹೇಮಾವತಿ ಮತ್ತು ಅಪ್ಪರ್ ಭದ್ರದಿಂದ ನೀರನ್ನು ಒದಗಿಸುವ ಕಡೆಗೆ ಗಮನಹರಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ನಿರುದ್ಯೋಗ ಸಮಸ್ಯೆಯನ್ನು ತೆಗೆದುಕೊಂಡರೆ ವಿದ್ಯಾವಂತ ತರುಣದಲ್ಲಿ ಮಾತ್ರ ನಿರುದ್ಯೋಗವಿದೆ ಎಂದು ತಿಳಿಯಬಾರದು. ರೈತ ಕಾರ್ಮಿಕರು, ಕಾರ್ಮಿಕ ವರ್ಗ ಇಂಥವರ ದುಸ್ಥಿತಿಯನ್ನು ಹೇಳತೀರದು. ಅವರಿಗೆ ಎರಡು ಹೊತ್ತು ಇರಲಿ ಒಂದು ಹೊತ್ತು ಊಟ ಮಾಡುವುದಕ್ಕೆ ಕೂಡ ತೊಂದರೆಯಾಗಿದೆ. ಕೈಗಾರಿಕಾ ಸಚಿವರು ಕೇವಲ ವಿದ್ಯಾವಂತ ತರುಣರ ಮುಖ ನೋಡಿಕೊಂಡು ಅವರ ನಿರುದ್ಯೋಗವನ್ನು ನಿವಾರಿಸಲು ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ.

(ಶ್ರೀ ಎನ್. ಬಸವಯ್ಯ

ಇದಕ್ಕೆ ಬದಲು ಪ್ರತಿ ತಾಲ್ಲೂಕಿನಲ್ಲಿಯೂ ಕೈಗಾರಿಕಾ ಘಟಕಗಳನ್ನು ಪ್ರಾರಂಭ ಮಾಡಿ ಅಲ್ಲಿರುವ ಕೂಲಿಕಾರರಿಗೆ ಉದ್ಯೋಗಗಳನ್ನು ಒದಗಿಸಿಕೊಡಬೇಕು. ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದುರು ತೆಗೆಯುತ್ತಾರೆ. ಅದನ್ನು ಪರಿಷ್ಕರಣ ಮಾಡುವ ಉದ್ಯಮವನ್ನು ಹಾಗೂ ತೆಂಗಿನ ನಾರಿನ ಉದ್ಯಮವನ್ನೂ ಪ್ರಾರಂಭ ಮಾಡಬೇಕು. ಇತ್ತ ಕಡೆ ಸರ್ಕಾರ ತನ್ನ ಗಮನ ಹರಿಸಬೇಕೆಂದು ನಾನು ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ.

ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸರ್ಕಾರ ಒಂದು ಉಪಕಾರ ಮಾಡಿದೆ. ಅನೇಕ ಕಂಬಳಿ ನೇಕಾರರು ಅಲ್ಲಿದ್ದಾರೆ. ಅವರಿಗೋಸ್ಕರ ಉಲನ್ ಮತ್ತು ಷೀಪ್ ಡೆವಲಪ್‌ಮೆಂಟ್ ಬೋರ್ಡ್ ಮಾಡಿದ್ದಾರೆ. ಅದು ಕೇವಲ ಸಲಹಾ ಸಮಿತಿಯಾಗಿದೆ. ಬಹಳ ಜನ ನೇಕಾರರಿಗೆ ಕುರಿ ಉಣ್ಣೆ ಸಿಕ್ಕುತ್ತಿಲ್ಲ, ಕುರಿಸಾಕಾಣಿಕೆ ಕಡಮೆಯಾಗುತ್ತಿದೆ. ಎಲ್ಲ ಜನಾಂಗದವರೂ ಮಾಂಸವನ್ನು ತಿನ್ನುವುದಕ್ಕೆ ಪ್ರಾರಂಭ ಮಾಡಿರುವುದರಿಂದ ಕುರಿಗಳು ನಾಶವಾಗುತ್ತಿವೆ. ಕಂಬಳಿ ನೇಕಾರರು ಕುರಿ ಉಣ್ಣೆಯಿಂದ ಜೀವನ ಮಾಡುತ್ತಿದ್ದಾರೆ, ಅದಕ್ಕಾಗಿ ಈ ಬೋರ್ಡನ್ನು ಒಂದು ಶಾಸನಬದ್ಧ ಮಂಡಲಿಯನ್ನಾಗಿ ಮಾಡಿ ಕುರಿ ಸಾಕಾಣಿಕೆಗೆ ಮತ್ತು ಕುರಿ ನೇಕಾರರಿಗೆ ಸಹಾಯ ಮಾಡಲು ಹೆಚ್ಚು ಹಣವನ್ನು ಒದಗಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ರಾಜ್ಯದಲ್ಲಿ ಡೆಂಟಲ್ ಕಾಲೇಜನ್ನು ತೆರೆದಿದ್ದು ಅದರಲ್ಲಿ ವ್ಯಾಸಂಗ ಮಾಡಿ ತೇರ್ಗಡೆಯಾಗಿ ಬಂದಂಥ 30—40 ಜನ ದಂತ ವೈದ್ಯರು ತ್ರಿಶಂಕು ಸ್ವರ್ಗದಲ್ಲಿದ್ದಾರೆ. ಅವರಿಗೆ ಕೆಲಸವನ್ನು ಕೊಟ್ಟಿಲ್ಲ. ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಸ್ಟೈಪೆಂಡ್ ಕೊಡುವ ಯೋಜನೆಯನ್ನು ತಂದಿದ್ದಾರೆ. ಇದರಿಂದ ಏನಾಗಿದೆ ಎಂದರೆ ಬೆಂಗಳೂರಿನವರನ್ನು ಕಾರವಾರಕ್ಕೆ ಹಾಕುವುದು, ಕಾರವಾರದವರನ್ನು ಬೆಂಗಳೂರಿಗೆ ಹಾಕುವುದು ಹೀಗಾಗಿ ಅವರಿಗೆ ಕೊಡುವ 200-300 ರೂಪಾಯಿನಿಂದ ಜೀವನ ಮಾಡುವುದಕ್ಕೂ ಆಗದೆ ಇದೆ. ಎಂ. ಬಿ. ಬಿ. ಎಸ್ ಆದವರಿಗೆ, ವೆಟರ್‌ನರಿ ಪಾಸ್ ಮಾಡಿದವರಿಗೆ ಏನು ಸವಲತ್ತುಗಳನ್ನು ಕೊಟ್ಟಿದ್ದಾರೆ ಅದೇ ರೀತಿಯ ಸವಲತ್ತನ್ನು 30—40 ಜನ ದಂತವೈದ್ಯ ಪದವೀಧರರಿಗೆ ಕೊಟ್ಟು ಅವರಿಗೆ ಕೆಲಸವನ್ನು ಒದಗಿಸ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಸಮಾಜಕಲ್ಯಾಣ ಸಚಿವರು ಪ್ರತಿಯೊಂದು ತಾಲ್ಲೂಕಿಗೂ ಒಂದು ಸಮುದಾಯ ಕಲ್ಯಾಣ ಮಂದಿರವನ್ನು ರಚನೆ ಎಲ್ಲ ಜನಾಂಗಗಳವರಿಗೆ ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಅನುಕೂಲ ಮಾಡಿಕೊಡಬೇಕು.

ಸಹಕಾರ ಸಂಘಗಳ ಬಗ್ಗೆ ಹೇಳುವುದಾದರೆ, ಮಾನ್ಯ ಶಂಕರ ಆಳ್ವ ಅವರು ಈ ಶಾಖೆಯನ್ನು ವಹಿಸಿಕೊಳ್ಳಬಾರದಾಗಿತ್ತು. ಅವರು ಬಹಳ ಸೌಮ್ಯ ಸ್ವಭಾವದವರು, ಸೌಮ್ಯ ಮೂರ್ತಿ. ಅಲ್ಲಿರುವ ಹೆಗ್ಗಣಗಳನ್ನು ಬೋನಿಗೆ ನುಗ್ಗಿಸುವುದಕ್ಕೆ ಇವರಿಂದ ಆಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಒಬ್ಬ ಜಾಯಿಂಟ್ ರಿಜಿಸ್ಟ್ರಾರ್ ಅವರು ವೆಂಕಟೇಶ್ವರ ಫರ್ಟಿಲೈಸರ್ಸ್‌ನಿಂದ ಗೊಬ್ಬರವನ್ನು ತೆಗೆದುಕೊಳ್ಳಬೇಕೆಂದು ಫೋನ್ ಮಾಡಿಸಿದರು ತಾಲ್ಲೂಕು ಅಗ್ರಿಕಲ್ಚರಲ್ ಮಲ್ಟಿ ಪರ್ಪಸ್ ಕೋ ಆಪರೇಟಿವ್ ಸೊಸೈಟಿಯವರು ಗೊಬ್ಬರ ತೆಗೆದುಕೊಂಡರು. ಅದರಲ್ಲಿ 99 ಪರ್ಸೆಂಟ್ ನಷ್ಟು ಸುದ್ದೆಯನ್ನು ಬೆರೆಸಿದ್ದರು. ಅದರ ಬಗ್ಗೆ ಈ ಹೊತ್ತಿನವರೆಗೂ ಏನೂ ಮಾಡುವುದಕ್ಕಾಗಿಲ್ಲ. ಅಲ್ಲಿದ್ದ ಬಡ ಮ್ಯಾನೇಜರನ್ನು ಸಸ್ಪೆನ್‌ಷನಲ್ಲಿಟ್ಟಿರುತ್ತಾರೆ. ಜಾಯಿಂಟ್ ರಿಜಿಸ್ಟ್ರಾರ್ ಅವರು ಮಾಡಿರುವುದು ಯಾರ ಗಮನಕ್ಕೂ ಬಂದಿಲ್ಲ. ಈ ಇಲಾಖೆಯಲ್ಲಿ ಅನೇಕ ಸೊಸೈಟಿಗಳನ್ನು ಮುಳುಗಿಸುವವರಿದ್ದಾರೆ. ಆದಷ್ಟು ಬೇಗ ಈಗಿರುವಂಥ ಕಾನೂನನ್ನು ಬದಲಾವಣೆ ಮಾಡಿ ಸಹಕಾರ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಸಂಚಾರಿ ನ್ಯಾಯಾಲಯವನ್ನು ತಾಲ್ಲೂಕಿಗೆ ಒಂದರಂತೆ ಮಾಡಬೇಕು. ಸಾರ್ವಜನಿಕ ಕ್ಷೇತ್ರದಲ್ಲಿ ಸಾರ್ವಜನಿಕ ಮುಖಂಡರೇ ಆಗಲೀ, ಅಧಿಕಾರಿಗಳೇ ಆಗಲೀ, ಏನಾದರೂ ಅನ್ಯಾಯಗಳನ್ನು ಮಾಡಿದರೆ ತಕ್ಷಣ ವಿಚಾರಿಸುವ ವ್ಯವಸ್ಥೆ ಮಾಡಬೇಕು. ಆರ್ಬಿಟ್ರೇಟರನ್ನು ನೇಮಿಸುವುದರಿಂದ ಅವರು ದುಡ್ಡು ತಿಂದು ಸಹಕಾರ ಸಂಘದ ಕಡೆ ಅಥವಾ ಬೇರೆ ಕಡೆ ಹೇಳಿದರೂ ಆಶ್ಚರ್ಯವಿಲ್ಲ. ಸಹಕಾರ ಸಂಘಗಳಿಗೋಸ್ಕರ ಸರ್ಕಾರ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದೆ. ಜಿಲ್ಲಾ ಬ್ಯಾಂಕುಗಳಿಂದ ಬೇಕಾದಷ್ಟು ಹಣವನ್ನು ಸಾಲವಾಗಿ ಕೊಟ್ಟಿದ್ದಾರೆ. ಇದರಲ್ಲಿ ವಸೂಲಾಗದೆ ಇರುವುದನ್ನು ವೇವ್ ಮಾಡಬೇಕೆಂದು ಯೋಚಿಸುತ್ತಿರುವಾಗಿ ತಿಳಿದು ಬಂದಿದೆ. ಒಂದು ವೇಳೆ ಹಾಗೇನಾದರೂ ಮಾಡಿದರೆ ಸಹಕಾರ ಸಂಘಗಳು ಖಂಡಿತವಾಗಿ ಬೆಳೆಯುವುದಿಲ್ಲ, ಸಹಕಾರ ತತ್ವದ ಬಗ್ಗೆ ಜನಗಳಿಗೆ ನಂಬಿಕೆ

ಬರುವುದಿಲ್ಲ. ಸಾಲ ತೆಗೆದುಕೊಂಡುದನ್ನು ನುಂಗಿ ಹಾಕುವುದಕ್ಕೆ ಸಹಾಯ ಮಾಡಿದಂತಾಗುತ್ತದೆ. ಮಾನ್ಯ ಮಂತ್ರಿಗಳು ಬೋಲ್ಡ್ ಸ್ಟೆಪ್ ತೆಗೆದುಕೊಂಡು ರಿಫಾರಂ ಮಾಡುತ್ತೇವೆನ್ನುವ ರೀತಿಯಲ್ಲಿ ಮುನ್ನುಗ್ಗಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಯುವಜನ ಕಲ್ಯಾಣದ ಬಗ್ಗೆ ಒಂದು ಮಾತನು ಹೇಳಬೇಕಾಗಿದೆ. ಯಾವುದೋ ಹಳೇ ಸಂಪ್ರದಾಯವನ್ನು ಇಟ್ಟುಕೊಳ್ಳಬಾರದು.— ಯುವಕರಲ್ಲಿ ನವಚೈತನ್ಯ ಮೂಡಿ ರಚನಾತ್ಮಕ ಕಾರ್ಯಗಳನ್ನು ಅವರು ಮಾಡತಕ್ಕ ರೀತಿಯಲ್ಲಿ ಯಾವುದಾದರೂ ವಿದ್ಯಾಭ್ಯಾಸವನ್ನು ಕೊಡತಕ್ಕ ರೀತಿಯಲ್ಲಿ, ಸ್ಫೂರ್ತಿ ಬರತಕ್ಕ ರೀತಿಯಲ್ಲಿ ಸಂಘಸಂಸ್ಥೆಗಳನ್ನು ಮಾಡಿ ಆ ಮುಖೇನ ರಾಷ್ಟ್ರದ ಅಭಿವೃದ್ಧಿಯ ಕಡೆಗೆ ಅವರು ಗಮನ ಕೊಡುವಂತೆ ಮಾಡಬೇಕು. ಹಿಪ್ಪಿ ಟೈಪ್ ಅನುಕರಣೆ ಮಾಡುವ ರೀತಿಯಲ್ಲಿ ಅನುಕರಣೆ ಮಾಡುವುದು ಬೆಳೆಯುತ್ತದೆ. ನಮ್ಮ ಧರ್ಮ, ನಮ್ಮ ಸಂಪ್ರದಾಯ ಇವೆಲ್ಲಕ್ಕೂ ಕುಂದು ಬಂದು ಭಾರತಕ್ಕೆ ಕೆಟ್ಟ ಹೆಸರು ತರುವ ರೀತಿಯಲ್ಲಿ ಬೆಳೆವಣಿಗೆಯಾಗುತ್ತಿದೆ. ಯುವಜನ ಕಲ್ಯಾಣ ಮಂತ್ರಿಗಳು ಯುವಕರು, ಅವರನ್ನು ನೋಡಿದರೆ ನವ ಚೈತನ್ಯ ತುಂಬಿದೆ. ಅವರು ನಮ್ಮ ದೇಶದಲ್ಲಿ ಯುವಕರಲ್ಲಿ ಸ್ಫೂರ್ತಿ ಬರುವ ರೀತಿಯಲ್ಲಿ ಕಾರ್ಯಕಲಾಪಗಳನ್ನು ಹಾಕಿಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ವ್ಯವಸಾಯ ಕ್ಷೇತ್ರದಲ್ಲಿ ರೈತರಿಗೆ ಸರಿಯಾದ ಸಹಾಯ ಸವಲತ್ತುಗಳು ಸಿಕ್ಕುವುದು ಕಡಮೆ ಸರ್ಕಾರದವರು ಎರಡು ಮೂರು ಎಕರೆ ಜಮೀನು ಕೊಟ್ಟರೆ, ವ್ಯವಸಾಯ ಮಾಡುವುದಕ್ಕೆ ಎತ್ತು ಮತ್ತು ಗಾಡಿ ಬೇಕು. ಒಂದು ಜೊತೆ ಎತ್ತು ಮತ್ತು ಒಂದು ಗಾಡಿಯನ್ನು ಇಟ್ಟುಕೊಳ್ಳಬೇಕಾದರೆ ಮೂರು ಸಾವಿರ ರೂಪಾಯಿವರೆಗೂ ಬೇಕಾಗುತ್ತದೆ. ಅಷ್ಟು ಹಣವನ್ನು ಖರ್ಚು ಮಾಡಿ ವ್ಯವಸಾಯ ಮಾಡುವುದಕ್ಕೆ ಅವನಿಂದ ಆಗುವುದಿಲ್ಲ. ಆದ್ದರಿಂದ ಬರೀ ಭೂಮಿ ಕೊಡುವದರಿಂದ ಏನೂ ತೃಪ್ತಿಯಾಗುವುದಿಲ್ಲ. ಸರ್ಕಾರದವರು ಜಿಯಾಲಜಿಸ್ಟ್ ಅವರಿಂದ ಸರ್ವೇ ಕೆಲಸ ಮಾಡಿಸಿ. ನೀರು ಸಿಕ್ಕುವ ಕಡೆ ಬಾವಿ ತೆಗೆಸಿ ಪಂಪ್‌ಸೆಟ್ ಹಾಕಿಸಿ ವ್ಯವಸಾಯ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ಅದರಲ್ಲಿ ಬರುವ ಉತ್ಪಾದನೆಯಿಂದ ಸುಲಭ ಕಂತುಗಳಲ್ಲಿ ಹಣವನ್ನು ವಸೂಲು ಮಾಡಿಕೊಳ್ಳಬಹುದು. ಸಾಲ ಕೊಟ್ಟರೆ ಅದನ್ನು ವಸೂಲು ಮಾಡುವುದಕ್ಕಾಗುವುದಿಲ್ಲ. ಕೊಟ್ಟ ದುಡ್ಡನ್ನು ಹಿಂದೆ ಮಾಡಿರುವ ಸಾಲವನ್ನು ತೀರಿಸುವುದಕ್ಕೆ, ಮದುವೆ ಮುಂತಾದ ಕಾರ್ಯಗಳನ್ನು ಮಾಡುವುದಕ್ಕೆ ಖರ್ಚು ಮಾಡುತ್ತಾರೆ. ಇದಲ್ಲದೆ ಅವನಿಗೆ ಬೇಕಾದ ವ್ಯವಸಾಯದ ಉಪಕರಣಗಳನ್ನು ಕೂಡ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡಿ, ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಕೃಷ್ಣರಾವ್ (ಗೌರಿಬಿದನೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥ ಸಚಿವರು ಮಂಡಿಸಿರತಕ್ಕ 1973–74ನೇ ಆಯವ್ಯಯವನ್ನು ಹೃತ್ಪೂರ್ವಕವಾಗಿ ಸುಸ್ವಾಗತಿಸುತ್ತ ಕೆಲವಾರು ಸಲಹೆಗಳನ್ನು ಹೇಳಬಯಸುತ್ತೇನೆ.

ನಮ್ಮ ದೇಶದಲ್ಲಿ ಕಾಂಗ್ರೆಸ್ಸು ಸರಕಾರ ಅಧಿಕಾರಕ್ಕೆ ಬಂದ ಮೇಲೆ ಈ ದೇಶದಲ್ಲಿ ಕಟುವಾದ ಕ್ಷಾಮ ಪರಿಸ್ಥಿತಿಗೆ ಈಡಾಗಿ ಬಹಳ ಜನ ತೊಂದರೆ ಪಡತಕ್ಕ ಈ ಸ್ಥಿತಿಯಲ್ಲಿ ಸರಕಾರ ಸುಮಾರು 54 ಕೋಟಿರೂಪಾಯಿಗಳಷ್ಟು ಖರ್ಚು ಮಾಡಿದ್ದಾರೆಂದು ಹೇಳಿದರೆ, ಹಿಂದೆಂದೂ ಇಡದೇ ಇರತಕ್ಕಂತಹ ದಿಟ್ಟ ಹೆಜ್ಜೆಯನ್ನು ನಮ್ಮ ಸರಕಾರ ಇಟ್ಟಿದೆ ಎಂದು ಹೇಳಿದರೆ ನಾವೆಲ್ಲರೂ ಹಾಗೂ ದೇಶದ ಜನರೂ ಇದನ್ನು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. ಹಿಂದೆ ಇಂತಹ ಒಂದು ಪರಿಸ್ಥಿತಿಯನ್ನು ಎಂದೂ ಯಾವ ಸರಕಾರ ಕೂಡ ಎದುರಿಸಿರಲಿಲ್ಲ. ಇಂತಹ ಕಟುವಾದ ಪರಿಸ್ಥಿತಿಯಲ್ಲಿ ಇವೊತ್ತಿನ ದಿವಸ ನಾವುಗಳು ಇದನ್ನು ಎದುರಿಸಿ ಮುನ್ನುಗ್ಗಬೇಕಾಗಿದೆ. ನಮ್ಮ ವಿರೋಧ ಪಕ್ಷದ ಸದಸ್ಯರುಗಳು ಅನೇಕ ವಿಧವಾದ ಟೀಕೆ ಮಾಡುತ್ತಿದ್ದಾರೆ. ನಮ್ಮ ಸಮಾಜವಾದ ಎಲ್ಲಿದೆ, ನಿಜವಾಗಿ ನೀವು ಬಡವರಿಗೆ ಸಹಾಯ ಮಾಡುವಂತೆ ಮಾಡುತ್ತಿದ್ದೀರಾ ಎಂದು ಅನೇಕ ವಿಧವಾದ ಟೀಕೆ ಟಿಪ್ಪಣಿಗಳನ್ನು ಮಾಡುವುದನ್ನು ಕೇಳಿದಾಗ ನನಗಂತೂ ಬಹಳ ಆಶ್ಚರ್ಯವಾಯಿತು. ಏಕೆಂದರೆ ಹಿಂದೆ ಎಂದೂ ಮಾಡದೇ ಇರತಕ್ಕ ಕೆಲಸವನ್ನು ನಮ್ಮ ಸರಕಾರ ಕೈಗೊಂಡಿರುವುದರಿಂದ ವಿರೋಧ ಪಕ್ಷದ ಸದಸ್ಯರೂ ಇದನ್ನು ಖಂಡಿತ ಅವರೂ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಸರ್ಕಾರದವರು ಸುಮಾರು ಐದು ಕೋಟಿ ರೂಪಾಯಿಗಳನ್ನು ವಸತಿ ಇಲ್ಲದೆ ಇರತಕ್ಕ ಜನಗಳಿಗೆ ನಿವೇಶನಗಳನ್ನು ಹಂಚಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಒಂದು ರೀತಿಯಾದ ಹೆಜ್ಜೆ ಮುಂದೆ ಇಟ್ಟು ಮಾಡುತ್ತಾ ಇರುವುದು ನಿಜವಾಗಿಯೂ ನಾವೆಲ್ಲರೂ ಸಂತೋಷಪಡಬೇಕಾದ ವಿಚಾರ. ಇಂತಹ ಒಳ್ಳೆಯ ಕೆಲಸಗಳನ್ನು ನಮ್ಮ ಸರಕಾರ ಮಾಡುತ್ತಿರುವುದಕ್ಕಾಗಿ ನಾನು ನಮ್ಮ ಸರಕಾರವನ್ನು ಸ್ವಾಗತಿಸುತ್ತೇನೆ ಮತ್ತು ಅವರು ಕೂಡ ಇದನ್ನು

(ಶ್ರೀ ಪಿ. ಕೃಷ್ಣರಾವ್)

ಸ್ವಾಗತಿಸುತ್ತಾರೆಂದು ಭಾವಿಸುತ್ತೇನೆ, ಇಂತಹ ಚರಿತ್ರಾರ್ಹವಾದ ಕೆಲಸಗಳನ್ನು ನಮ್ಮ ಅರ್ಥ ಸಚಿವರು ನಮ್ಮ ದೇಶದ ಮುಂದೆ ಇಟ್ಟಿದ್ದಾರೆ, ಇಂತಹ ಒಂದು ಪರಿಸ್ಥಿತಿಯಲ್ಲಿ ಈ ದೇಶ ಸಮಾಜವಾದದಲ್ಲಿ ಖಂಡಿತ ಮುಂದುವರಿಯುವುದರಲ್ಲಿ ಯಾವ ಸಂದೇಹವೂ ಇಲ್ಲ ಎಂದು ನಾನು ಭಾವಿಸುತ್ತೇನೆ. ಇಂದು ರೈತರು ಬಹಳ ಕಠಿಣ ಪರಿಸ್ಥಿತಿಯಲ್ಲಿ ಇದ್ದಾರೆ. ಎಷ್ಟು ಆಹಾರ ಬೆಳೆಯಬೇಕೆಂದು ಇವರಿಂದ ನಿರೀಕ್ಷಿಸಿದ್ದೆವೋ ಅಷ್ಟು ಆಹಾರ ಬೆಳೆಯಲು ಮಳೆ ಇಲ್ಲದೇ ಇರುವುದೇ ಒಂದು ಮುಖ್ಯ ವಾದ ಕಾರಣ. ಮಳೆ ಬಾರದೇ ಇರುವುದಕ್ಕೆ ಅರಣ್ಯ ಸಂಪತ್ತು ಹಾಳಾಗುತ್ತಿದೆ ಎಂದು ತಜ್ಞರು ತಿಳಿಸುತ್ತಿದ್ದಾರೆ. ಸಾಧ್ಯವಾದಷ್ಟು ಮಟ್ಟಿಗೆ ಅರಣ್ಯ ಸಂಪತ್ತನ್ನು ಕಡಿಯದಂತೆ ಅದು ಇನ್ನೂ ಹೆಚ್ಚಾಗಿ ಬೆಳೆಯುವಂತೆ ಮಾಡಬೇಕು ಎಂದು ನಾನು ಇಲ್ಲಿ ಸರಕಾರಕ್ಕೆ ಸಲಹೆ ಮಾಡುತ್ತೇನೆ.

ಎರಡನೆಯದು ಪ್ರತಿಯೊಬ್ಬ ರೈತನಿಗೂ ಅವನ ಆರ್ಥಿಕ ಮಟ್ಟವನ್ನು ಉತ್ತಮ ಮಾಡಿಕೊಳ್ಳಲು ಜಮೀನು ಕೊಡುವುದರಿಂದ ಅಲ್ಲಿಗೆ ಮುಗಿಯುವುದಿಲ್ಲ. ಅವನ ಭೂಮಿ ಇರತಕ್ಕ ಪ್ರದೇಶಕ್ಕೆ ತಜ್ಞರನ್ನು ಕರೆದುಕೊಂಡು ಹೋಗಿ ಅವನ ಭೂಮಿ ಚೆನ್ನಾಗಿದೆಯೇ ಇಲ್ಲವೇ ಎನ್ನುವುದನ್ನು ಪರೀಕ್ಷಿಸಿ ತಕ್ಕ ಸಲಹೆಗಳನ್ನು ಕೊಡದೇ ಇದ್ದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಉತ್ತಮವಾದ ಬೀಜ ಹಾಗೂ ಪಂಪುಸೆಟ್ಟುಗಳನ್ನು ಒದಗಿಸಿ ಅದರ ಮೂಲಕ ಅವನ ಆರ್ಥಿಕ ಮುಗ್ಗಟ್ಟನ್ನು ಸರಿಪಡಿಸಲು ಸರಕಾರವೇ ಇಂತಹ ಅವಕಾಶಗಳನ್ನು ಮಾಡಿಕೊಡಬೇಕಾಗಿದೆ.

ಮೂರನೇದು ಸಹಕಾರ ಸಂಘಗಳು : ಇಂದು ಕೆಲವಾರ ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡಿಕೊಂಡು ಬರುತ್ತಿವೆ ಮತ್ತು ಕೆಲವು ದೊಡ್ಡ ದೊಡ್ಡ ಸಹಕಾರ ಸಂಘಗಳೂ ಚೆನ್ನಾಗಿ ಕೆಲಸ ಮಾಡುತ್ತಿವೆ. ಆದರೆ ಅಲ್ಲಲ್ಲಿ ಒಂದೆರಡು ಕೆಟ್ಟ ಸಹಕಾರ ಸಂಘಗಳಿರುವುದರಿಂದ ಒಳ್ಳೆಯ ಸಹಕಾರ ಸಂಘಗಳಿಗೂ ಕೆಟ್ಟ ಹೆಸರು ಬರುತ್ತಿವೆ. ಒಟ್ಟಿನಲ್ಲಿ ಕೆಲವಾರು ಸಹಕಾರ ಸಂಘಗಳು ಸಾಲಗಳನ್ನು ಕೊಡದೇ ನಿಲ್ಲಿಸಿರುವುದರಿಂದಾಗಿ ರೈತರು ಬಹಳ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಬಹು ಹಿಂದೆಯೇ ಇದು ಕ್ಷಾಮಡಾಮರುಗಳಿಗೆ ಸಿಕ್ಕಿದೆ ಮತ್ತು ಇಲ್ಲಿನ ರೈತರು ಬಹು ಸಂಕಟ ಪರಿಸ್ಥಿತಿಯಲ್ಲಿದ್ದಾರೆ. ಇದನ್ನು ತಮಗೆ ಪ್ರತ್ಯಕ್ಷವಾಗಿ ಇವೊತ್ತಿನ ದಿವಸ ತೋರಿಸ ಬೇಕಾದರೆ ಎಷ್ಟೋ ಮನೆಗಳಲ್ಲಿ ರೈತರು ಎರಡು ಹೊತ್ತು ಊಟ ಕೂಡ ಮಾಡುತ್ತಿಲ್ಲ ಮತ್ತು ರೈತರಿಗೆ ಕೂಲಿ ಕೆಲಸಗಳೂ ಸಿಗುತ್ತಿಲ್ಲ. ಇಂತಹ ಕೋಲಾರ ಜಿಲ್ಲೆಯ ಬಗ್ಗೆ ಆಯವ್ಯಯದಲ್ಲಿ ಇಟ್ಟಿರುವ ಪಟ್ಟಿಯಲ್ಲಿ ನಮ್ಮ ಅರ್ಥ ಸಚಿವರು ಏಕೆ ಸೇರಿಸಲಿಲ್ಲ ನನಗೆ ಗೊತ್ತಾಗಲಿಲ್ಲ. ಕೋಲಾರ ಜಿಲ್ಲೆ ಕ್ಷಾಮ ಪರಿಸ್ಥಿತಿಗೆ ಸಿಕ್ಕಿರತಕ್ಕ ಎಂಟು ಜಿಲ್ಲೆಗಳ ಜೊತೆಗೆ ಇದನ್ನು ಸೇರಿಸಬೇಕು ಎಂದು ನಾನು ಅವರಲ್ಲಿ ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ. ಇವೊತ್ತಿಗೂ ಕೂಡ ನಮ್ಮ ಕೋಲಾರ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ನದಿಗಳು ಯಾವುವೂ ಇಲ್ಲ. ಇಲ್ಲಿರುವುದೆಲ್ಲ ಕೆರೆಗಳು. ಇದಕ್ಕಾಗಿ ಇಲ್ಲಿ ಮೈನರು ಇರಿಗೇಷನ್ ಕೆಲಸಗಳನ್ನು ಹೆಚ್ಚು ವ್ಯವಸ್ಥೆ ಮಾಡಬೇಕು. ಇಲ್ಲದೆ ಹೋದರೆ ಬಾವಿಗಳನ್ನು ತೋಡಿಸಿ ಅದರ ಮೂಲಕ ನೀರಾವರಿ ವ್ಯವಸ್ಥೆ ಮಾಡಬೇಕು. ಸರಾಸರಿ ಇಲ್ಲಿ ಮಳೆ ಬರುವುದು ನೋಡಿದರೆ 16 ರಿಂದ 25 ಇಂಚುಗಳಷ್ಟು ಮಳೆ ಕೂಡ ಆಗುತ್ತಿಲ್ಲ. ಕೇವಲ ಒಂದೆರಡು ಕೆರೆಗಳನ್ನು ಬಿಟ್ಟರೆ ಇತರ ಕಡೆಗಳಲ್ಲಿ ಬಾವಿಗಳನ್ನು ತೆಗೆಸಬೇಕು. ಇಂತಹ ಕ್ಷಾಮದ ಪರಿಸ್ಥಿತಿಯಿರುವ ನಮ್ಮ ಜಿಲ್ಲೆಗೆ ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಇವೊತ್ತಿನ ದಿವಸ ಗುಲ್ಬರ್ಗಾ, ಬೀದರು ಇಲ್ಲಿಗೆ ಯಾವ ರೀತಿ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೋ ಅದೇ ರೀತಿ ಇಲ್ಲೂ ಕೆಲವಾರು ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಮಾಡಿಸಿಕೊಡಬೇಕೆಂದು ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಸರಕಾರ ಬಂದು ಸುಮಾರು 25 ವರ್ಷಗಳಾದವು. ಅದೂ ಸ್ವಾತಂತ್ರ್ಯ ಬಂದ ಮೇಲೆ ಬಂದು ಸರಕಾರ, ನಮ್ಮ ರಾಜ್ಯದಲ್ಲಿ ಸರಿಯಾದ ಕಾರ್ಯಕ್ರಮ ಹಾಕಿಕೊಂಡು ನಿಜವಾಗಿ ಅದಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಟ್ಟಿದ್ದ ಪಕ್ಷದಲ್ಲಿ ಇವೊತ್ತಿನ ದಿವಸ ನಾವು ಇಷ್ಟು ಕಷ್ಟಗಳನ್ನು ಎದುರಿಸಬೇಕಾದ ಪರಿಸ್ಥಿತಿಯೇ ಬರುತ್ತಿರಲಿಲ್ಲ. ಬಹು ಭಾಗದಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಖರ್ಚು ಮಾಡಿ ಮಾಡಬೇಕಾದ ನೀರಾವರಿ ಕೆಲಸಗಳನ್ನು ಆದಷ್ಟು ಬೇಗನೆ ಮಾಡದಿದ್ದರೆ ನಮಗೆ ಇಂದು ಒದಗಿರುವ ಕಷ್ಟಗಳು ಇರುತ್ತಿರಲಿಲ್ಲ. ಇವೊತ್ತಿನ ದಿವಸ ಇದರ ಫಲವನ್ನು ಅನುಭವಿಸಬೇಕಾಗಿ ಬಂದಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು, ಇಂತಹ ಒಂದು ಸಂದರ್ಭದಲ್ಲಿ ಕೋಲಾರ ಜಿಲ್ಲೆಯ ಅನೇಕ ತಲ್ಲೂಕುಗಳಲ್ಲಿರುವ ಜನರು ಬಹು ಕಷ್ಟಗಳನ್ನು ಅನುಭವಿಸು

ತ್ತಿದ್ದಾರೆ, ಆದುದರಿಂದ ಈ ಸಂದರ್ಭದಲ್ಲಿ ಕೋಲಾರ ಜಿಲ್ಲೆಯ ಬಗ್ಗೆ ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಒಂದು ಬೋರ್ಡನ್ನು ರಾಯಲಸೀಮಾ ಬೋರ್ಡ್ ಎಂದು ಆಂಧ್ರ ಪ್ರದೇಶದಲ್ಲಿರುವಂತೆ ಇಲ್ಲೂ ಒಂದು ಬೋರ್ಡನ್ನು ಸ್ಥಾಪನೆ ಮಾಡಿದರೆ ಕೋಲಾರ ಜಿಲ್ಲೆಯ ಬಗ್ಗೆ ಅನುಕೂಲವಾಗುತ್ತದೆ. ನಮ್ಮ ಕೋಲಾರ ಜಿಲ್ಲೆಯಲ್ಲಿರುವ, ಮುಳಬಾಗಿಲು, ಶ್ರೀನಿವಾಸಪುರ, ಚಿಂತಾಮಣಿ, ಸಿಡಲಗಟ್ಟ, ಬಾಗೇಪಲ್ಲಿ, ಗುಡಿಬಂಡ, ಗೌರಿಬಿದನೂರು, ತುಮಕೂರು ಜಿಲ್ಲೆಯಲ್ಲಿ ಮಧುಗಿರಿ ಹಾಗೂ ಪಾವಗಡ ಇವು ಕೂಡ ನಮ್ಮ ಬಾರ್ಡರಿನಲ್ಲಿದೆ. ಇದಕ್ಕಾಗಿ ಇಲ್ಲಿ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಮಾಡಲು ಒಂದು ಬೋರ್ಡನ್ನು ಮಾಡಿ ಅದರ ಮೂಲಕ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಸಹಾಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಮಾನ್ಯ ಅರ್ಥ ಸಚಿವರಿಗೆ ಸಲಹೆ ಮಾಡುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಶ್ರೀ ಎಂ. ವಿ. ಕೃಷ್ಣಪ್ಪನವರಿಗೆ ಹೇಗೂ ಕೆಲಸವಿಲ್ಲ. ಅವರನ್ನು ಈ ಬೋರ್ಡಿಗೆ ಚೇರ್ಮನ್ನರಾಗಿ ಮಾಡಿಬಿಡಿ.

ಶ್ರೀ ವಿ. ಕೃಷ್ಣರಾವ್.—ಇಂದು ಇಲ್ಲಿ ಕ್ಷಾಮಕ್ಕೆ ಸಿಕ್ಕಿರುವ ಈ ಭಾಗಗಳಿಗೆ ಶಾಶ್ವತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ ಎಂದು ಪುನಃ ಒತ್ತಾಯ ಮಾಡುತ್ತಿದ್ದೇನೆ, ಇಲ್ಲಿನ ಜನ ಬಹು ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಪ್ರತಿ ವರ್ಷವೂ ಕ್ಷಾಮಕ್ಕೆ ತುತ್ತಾಗುತ್ತಿರುವ ಇಲ್ಲಿನ ಭಾಗದಲ್ಲಿ ರಸ್ತೆ ಕೆಲಸಗಳನ್ನು ಮಾಡುತ್ತೇವೆಂದು ಸುಮ್ಮನೆ ಮಣ್ಣು ಹಾಕಿ ಸರಿ ಮಾಡಿದರೆ ಮತ್ತೆ ಅದೇ ರಸ್ತೆ ಹಾಳಾಗಿ ಹೋಗುತ್ತದೆ. ಇದಕ್ಕಾಗಿ ಇಲ್ಲಿ ಸಣ್ಣ ನೀರಾವರಿ ಕಾರ್ಯಕ್ರಮಗಳನ್ನು ಹೆಚ್ಚು ತೆಗೆದುಕೊಂಡರೆ ಅನುಕೂಲವಾಗುತ್ತದೆ. ಇಂತಹ ಕೆಲಸಗಳನ್ನು ತಾಲ್ಲೂಕು ಬೋರ್ಡುಗಳ ಮೂಲಕ ಮಾಡಿಸಲು ಅವಕ್ಕೆ ಐದಾರು ಸಾವಿರದಷ್ಟು ಗ್ರಾಂಟುಗಳನ್ನು ಕೊಟ್ಟು ನಮ್ಮ ಭಾಗದ ಮೈನರು ಇರಿಗೇಷನ್ ಕೆಲಸಗಳನ್ನು ಬೇಗನೆ ಮಾಡಲು ಸಾಧ್ಯವಾಗುತ್ತದೆ ಎಂದು ಇಂತಹ ಸಂಸ್ಥೆಗಳಿಗೆ ಸಹಾಯ ಮಾಡಿದರೂ ಇಲ್ಲಿ ಬೇಗ ಕೆಲಸಗಳು ಆಗುತ್ತಿಲ್ಲ. ಇದಕ್ಕಾಗಿ ಸರಕಾರದವರೇ ನೇರವಾಗಿ ಪಿ.ಡಬ್ಲ್ಯು.ಡಿ. ಮೂಲಕ ಇಲ್ಲಿನ ಸಣ್ಣ ನೀರಾವರಿ ಕೆಲಸಗಳನ್ನು ಮಾಡಿಸಿಕೊಟ್ಟರೆ ನಮ್ಮ ಭಾಗದ ಜನಕ್ಕೆ ಸಹಾಯವಾಗುತ್ತದೆ. ಇದಕ್ಕಾಗಿ ಸರಕಾರ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ನಿರ್ದಿಷ್ಟವಾದ ಸಲಹೆಗಳನ್ನು ಏನು ಕೊಟ್ಟಿದ್ದೇನೋ ಅದಕ್ಕೆ ಸರಕಾರ ಗಮನಕೊಡಬೇಕು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 P. M.

HALF-AN-HOUR DISCUSSION ARISING OUT OF ANSWERS

to Starred Question No. 572

re: Misappropriation of manure in TACM Society, T.Narsipur

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಟಿ. ನರಸೀಪುರ ತಾಲ್ಲೂಕ್ ಅಗ್ರಿಕಲ್ಚರಲ್ ಕೋ ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಸುಮಾರು 2ಲಕ್ಷ 65 ಸಾವಿರ ರೂಪಾಯಿ ಮೊತ್ತದ ಗೊಬ್ಬರ ದುರುಪಯೋಗವಾಗಿರುವ ಅಂಶ ಹೊರಬಿದ್ದಿದೆ. ಇಷ್ಟೊಂದು ಪ್ರಮಾಣದಲ್ಲಿ ಹಣ ದುರುಪಯೋಗವಾಗಿದ್ದರೂ ಸಹ ನಮ್ಮ ರಾಜ್ಯದ ಪ್ರಮುಖ ಅಧಿಕಾರಿಗಳಾದ ರಿಜಿಸ್ಟ್ರಾರ್, ಡೆಪ್ಯೂಟಿ ರಿಜಿಸ್ಟ್ರಾರ್ ಮತ್ತು ನಮ್ಮ ಮಂತ್ರಿಗಳು ಈ ಕಡೆಗೆ ಗಮನ ಹರಿಸದೇ ಇದ್ದುದು ಮತ್ತು ಈ ಹಣ ಸಾರ್ವಜನಿಕರಿಗಾಗಲೀ ದೇಶಕ್ಕಾಗಲೀ ಸೇರಿದ್ದಲ್ಲ, ಯಾರು ಬೇಕಾದರೂ ತಿಂದುಹಾಕಬಹುದು ಎಂಬ ಪ್ರವೃತ್ತಿಯನ್ನು ಅನುಸರಿಸಿಕೊಂಡು ಬಂದಿರುವುದನ್ನು ನೋಡಿ ನಾವು ವಿಷಾದ ಪಡಬೇಕಾಗಿದೆ. ಇದು ಯಾರಮನೆ ದುಡ್ಡು ಎಂದು ಕೇಳುತ್ತೇನೆ. ಅಧಿಕಾರಿಗಳು ಮನಸ್ಸಿಗೆ ಬಂದ ಹಾಗೆ ಉತ್ತರ ಬರೆದು ಕಳಿಸಿದ್ದನ್ನು ಇಲ್ಲಿ ಮಂತ್ರಿಗಳು ಹೇಳಿಬಿಟ್ಟಿದ್ದಾರೆ. ಇಂದು ಪ್ರತಿ ತಿಂಗಳೂ ಗೊಬ್ಬರದ ಸ್ಟಾಕನ್ನು ಚೆಕ್ ಮಾಡುವ ಅಧಿಕಾರವನ್ನು ಬಿ. ಡಿ. ಓ. ಅವರಿಗೆ ಕೊಟ್ಟಿದ್ದಾರೆ. ಇದು ದುರುಪಯೋಗವಾಗಿರುವುದು 1971 ನೇ ಇಸವಿಯಲ್ಲಿ. ಒಬ್ಬ ಗುಮಾಸ್ತ